ವಿಜಯಪುರ | ಸಂಪುಟ 02 | ಸಂಚಿಕೆ 106 | ಪುಟ 4 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ    Editor: Indushekhar Manur

editor.udayarashmi@gmail.com    RNI NO: KARKAN/2023/86203    ಶನಿವಾರ, ಜೂನ್ 15, 2024



“ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಬಂಧಿತ ಸಿನಿಮಾ ನಟ ದರ್ಶನ್‌ಗೆ ಕೃಷಿ ಇಲಾಖೆಯ ರಾಯಭಾರಿಯಾಗಿ ಇನ್ನು ಮುಂದುವರಿಸುವುದು ಅಸಾಧ್ಯ. ದರ್ಶನ್‌ಗೆ ವಿಐಪಿ ಸೌಕರ್ಯ ನೀಡಿಲ್ಲ. ಆರೋಪ ಸಾಬೀತಾದರೆ ಅವರಿಗೆ ಶಿಕ್ಷೆಯಾಗುತ್ತದೆ.”

– ಎಂ.ಬಿ.ಪಾಟೀಲ
ಸಚಿವರು, ಕರ್ನಾಟಕ ಸರ್ಕಾರ

ರಾಹುಲ್ ಗಾಂಧಿಯವರನ್ನು ಕೋರ್ಟ್‌ಗೆ ಎಳೆದಿದ್ದಕ್ಕೆ ಪ್ರತಿಕಾರ | ಸೇಡಿನ ರಾಜಕಾರಣ | ರಾಜಕೀಯ ಪಿತೂರಿ ಎಂದ ಬಿಜೆಪಿ ನಾಯಕರು

# ಯಡಿಯೂರಪ್ಪ ವಿರುದ್ಧ ಕಾಂಗ್ರೆಸ್ ಸೇಡು :ಬಿಜೆಪಿ ಆರೋಪ

ಬೆಂಗಳೂರು: ‘ರಾಜ್ಯದ ಕಾಂಗ್ರೆಸ್ ಸರ್ಕಾರವು ಮಾಜಿ ಮುಖ್ಯಮಂತ್ರಿ ಬಿ.ಎಸ್ ಒಳಗೊಂಡಿರುವ ಪೋಕ್ಸೋ ಪ್ರಕರಣದಲ್ಲಿ ಸೇಡಿನ ರಾಜಕಾರಣ ಮಾಡುತ್ತಿದೆ. ಮಾನನಷ್ಟ ಮೊಕದ್ದಮೆಯಲ್ಲಿ ರಾಹುಲ್ ಗಾಂಧಿಯವರನ್ನು ಕೋರ್ಟ್‌ಗೆ ಎಳೆದಿದ್ದಕ್ಕೆ ಯಡಿಯೂರಪ್ಪ ವಿರುದ್ಧ ಸೇಡು ತೀರಿಸಿಕೊಳ್ಳುತ್ತಿದ್ದಾರೆ” ಎಂದು ರಾಜ್ಯ ಬಿಜೆಪಿ ಮುಖಂಡರು ಆರೋಪಿಸಿದ್ದಾರೆ.

ಪ್ರಮುಖ ಬೆಳವಣಿಗೆಯೊಂದರಲ್ಲಿ, ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಪೋಕ್ಸೊ ಪ್ರಕರಣದಲ್ಲಿ ಹಿರಿಯ ಬಿಜೆಪಿ ನಾಯಕ ಯಡಿಯೂರಪ್ಪ ವಿರುದ್ಧ ಬೆಂಗಳೂರಿನ ವಿಶೇಷ ನ್ಯಾಯಾಲಯ ಗುರುವಾರ ಜಾಮೀನು ರಹಿತ ವಾರಂಟ್ ಹೊರಡಿಸಿದೆ.

ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಮಾತನಾಡಿ, ”ಇದು ದ್ವೇಷದ ರಾಜ–ಕಾರಣ ಅಲ್ಲವೇ, ದ್ವೇಷದ ರಾಜಕಾರಣ ಮಾಡುವುದಿಲ್ಲ ಎಂದು ಹೇಳುತ್ತಿದ್ದ ಸಿಎಂ ಸಿದ್ದರಾಮಯ್ಯ ಈಗ ಅದನ್ನೇ ಮಾಡುತ್ತಿದ್ದಾರೆ, ಇದನ್ನು ರಾಜ್ಯದ ಜನತೆ ಪ್ರಶ್ನಿಸುತ್ತಾರೆ.

ಯಡಿಯೂರಪ್ಪ ವಿರುದ್ಧ ಪೋಕ್ಸೋ ಪ್ರಕರಣ ದಾಖಲಿಸಿ ನಾಲ್ಕು ತಿಂಗಳಾದರೂ ಸರ್ಕಾರ ನಿಷ್ಕ್ರಿಯವಾಗಿದ್ದು ಏಕೆ ಎಂದು ಜನ ಕೇಳುತ್ತಿದ್ದಾರೆ. ಗೃಹ ಸಚಿವ ಜಿ.ಪರಮೇಶ್ವರ ಅವರು ಪ್ರಕರಣದಲ್ಲಿ ಹುರುಳಿಲ್ಲ ಎಂದು ಹೇಳಿಕೆ ನೀಡಿದ್ದರು” ಎಂದರು.



ಬೆಂಗಳೂರಿನಲ್ಲಿ ರಾಹುಲ್ ಗಾಂಧಿ ಅವರನ್ನು ಕೋರ್ಟ್‌ಗೆ ಎಳೆದಿದ್ದಕ್ಕೆ, ಬಿಜೆಪಿಯನ್ನು ನ್ಯಾಯಾಲಯಕ್ಕೆ ಎಳೆಯಬೇಕೆಂದು ಕಾಂಗ್ರೆಸ್ ಬಯಸುತ್ತದೆ ಎಂಬುದು ಬಹಿರಂಗ ರಹಸ್ಯ ಎಂದು ಅವರು ಹೇಳಿದರು.

“ಯಡಿಯೂರಪ್ಪ ಪ್ರಕರಣದಲ್ಲಿ ನ್ಯಾಯಾಲಯದ ಆದೇಶವನ್ನು ನಾವು ಗೌರವಿಸುತ್ತೇವೆ. ಆದರೆ, ಇದು ರಾಜಕೀಯ ಪಿತೂರಿಯಾಗಿದೆ ಎಂದು ಹೇಳಲಾದ ಘಟನೆ ಫೆಬ್ರವರಿ 2 ರಂದು ನಡೆದಿದ್ದು, ಮಾರ್ಚ್‌ನಲ್ಲಿ ಪ್ರಕರಣ ದಾಖಲಾಗಿದೆ. ಯಡಿಯೂರಪ್ಪ ಹೇಳಿಕೆ ದಾಖಲಿಸಲು ಪೊಲೀಸ್ ಠಾಣೆಗೆ ತೆರಳಿದ್ದರು. ಆದರೆ, ಪೊಲೀಸರು ಅದು ಅಗತ್ಯವಿಲ್ಲ ಎಂದು ಅವರಿಗೆ ಹೇಳಿದರು ಮತ್ತು ನಂತರ ಅವರ ನಿವಾಸದಲ್ಲಿ ಅವರ ಹೇಳಿಕೆಯನ್ನು ದಾಖಲಿಸಿಕೊಂಡರು” ಎಂದು ರವಿ ಹೇಳಿದರು.

ಈ ಕುರಿತು ಪ್ರತಿಕ್ರಿಯಿಸಿದ ಬಿಜೆಪಿ ಎಂಎಲ್‌ಸಿ ಹಾಗೂ ವಿಧಾನ ಪರಿಷತ್‌ನ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, ಪ್ರಕರಣದಲ್ಲಿ ಯಾವುದೇ ಹುರುಳಿಲ್ಲ, ಸತ್ಯಾಂಶವಿಲ್ಲ. ದೂರುದಾರರು ಮಾನಸಿಕ ಅಸ್ವಸ್ಥರಾಗಿದ್ದು, ಐಎಎಸ್–ಐಪಿಎಸ್ ಅಧಿಕಾರಿಗಳು ಹಾಗೂ ರಾಜಕಾರಣಿಗಳ ವಿರುದ್ಧ 60ಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದು ಗೃಹ ಸಚಿವ ಪರಮೇಶ್ವರ ಹೇಳಿದ್ದರು. ಸರ್ಕಾರವೇ ಈ ಪ್ರಕರಣ ಮುಖ್ಯವಲ್ಲ ಎಂದು ಹೇಳಿತ್ತು. ಹೇಳಿಕೆ ನೀಡಲು, ಪೊಲೀಸ್ ಠಾಣೆಗೆ ಬರದಂತೆ ಪೊಲೀಸರು ಅವರನ್ನು ಏಪ್ರಿಲ್‌ನಲ್ಲಿ ಧ್ವನಿ ಮಾದ–ರಿಯನ್ನು ಸಂಗ್ರಹಿಸಿದರು” ಎಂದು ಅವರು ಹೇಳಿದರು.

“ಇಡೀ ವಿಷಯವು ಮಾನನಷ್ಟ ಪ್ರಕರಣದಲ್ಲಿ ರಾಹುಲ್ ಗಾಂಧಿಯನ್ನು ನ್ಯಾಯಾಲಯಕ್ಕೆ ಎಳೆದಿದ್ದಕ್ಕೆ ಪ್ರತೀಕಾರವಾಗಿ ಕಾಂಗ್ರೆಸ್ ನಡೆಸಿದ ಪಿತೂರಿಯಾಗಿದೆ. ಕಾಂಗ್ರೆಸ್‌ನ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರ ಸಲಹೆಯ ಮೇರೆಗೆ ಸಿಎಂ, ಉಪ ಮುಖ್ಯಮಂತ್ರಿ ಮತ್ತು ಗೃಹ ಸಚಿವರು ಈ ಸಂಚು ರೂಪಿಸಿದ್ದಾರೆ’ ಎಂದು ರವಿಕುಮಾರ್ ಆರೋಪಿಸಿದ್ದಾರೆ.

“ಕಳೆದ ನಾಲ್ಕು ತಿಂಗಳಿಂದ ಕ್ರಮಕೈಗೊಳ್ಳದ ಕಾಂಗ್ರೆಸ್ ಏಕಾಏಕಿ ಎಚ್ಚೆತ್ತುಕೊಂಡಿದೆ. ಜಾಮೀನು ರಹಿತ ಬಂಧನ ವಾರೆಂಟ್ ಪಡೆದು ಯಡಿಯೂರಪ್ಪ ಅವರನ್ನು ಬಂಧಿಸಲು ಮುಂದಾಗಿದ್ದಾರೆ. ಇದು ಅತ್ಯಂತ ಖಂಡನೀಯ” ಎಂದು ಬಿಜೆಪಿ ಎಂ–ಎಲ್‌ಸಿ ಚಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

## ಬಿಎಸ್ವೈ ಬಂಧನಕ್ಕೆ ಹೈಕೋರ್ಟ್ ತಾತ್ಕಾಲಿಕ ತಡೆ

ಬೆಂಗಳೂರು: ಅಪ್ರಾಪ್ತ ಬಾಲಕಿಗೆ ಲೈಂಗಿಕ ದೌರ್ಜನ್ಯ ಕೇಸ್‌ಗೆ ಸಂಬಂಧಿಸಿದ ಪೋಕ್ಸೋ ಕೇಸ್‌ನಲ್ಲಿ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪಗೆ ಹೈಕೋರ್ಟ್ ಬಿಗ್ ರಿಲೀಫ್ ನೀಡಿದ್ದು, ಬಿಎಸ್‌ವೈ ಬಂಧನಕ್ಕೆ ಹೈಕೋರ್ಟ್ ತಾತ್ಕಾಲಿಕ ತಡೆ ನಿಡಿದೆ.

ಅರ್ಜಿ ವಿಚಾರಣೆ ವೇಳೆ ಬಿಎಸ್‌ವೈಗೆ ಸೋಮವಾರವೇ ವಿಚಾರಣೆಗೆ ಹಾಜರಾಗುವಂತೆ ನ್ಯಾ.ಕೃಷ್ಣ ಎಸ್ ದೀಕ್ಷಿತ್‌ರವರ ಏಕಸದಸ್ಯ ಪೀಠ ಸೂಚಿಸಿದೆ. ಜೂ.17ರಂದು ಕೋರ್ಟ್ ಮುಂದೆ ಹಾಜರಾಗುವುದಾಗಿ ಬಿಎಸ್‌ವೈ ಉತ್ತರಿಸಿದ್ದಾರೆ. ಅವರಿಗೆ ವಯಸ್ಸಾಗಿದ್ದು ಸಹಜವಾಗಿಯೇ ಅನಾರೋಗ್ಯ ಸಮಸ್ಯೆಗಳಿರುತ್ತವೆ. ಹೀಗಾಗಿ ಬಂಧಿಸಿ ತನಿಖೆಗೊಳಪಡಿಸುವ ಅಗತ್ಯವಿಲ್ಲ ಎಂದು ಹೈಕೋರ್ಟ್ ಗಮನಿಸಿದೆ ಎಂದು ಹೇಳಲಾಗಿದೆ.


ಸೋಮವಾರ ವಿಚಾರಣೆಗೆ ಹಾಜರಾಗಲು ಸಿದ್ಧರಿದ್ದೀರಾ ಎಂದು ಯಡಿಯೂರಪ್ಪ ಪರ ವಕೀಲರಿಗೆ ಹೈಕೋರ್ಟ್ ಪ್ರಶ್ನೆ ಮಾಡಿದ್ದು, ಹೈಕೋರ್ಟ್ ಆದೇಶ ಪಾಲಿಸಲಾಗುವುದು ಎಂದು ಸಿ.ವಿ.ನಾಗೇಶ್ ಹೇಳಿದ್ದಾರೆ.

### ರಾಜ ನುಡಿ

ವಾಹನವನ್ನು ಮೇಲೆತ್ತುವ ‘ಜಾಕ್’ ಹೇಳುತ್ತದಂತೆ ಭೂಮಿಯು ಹೊರಗೆ ಅಂಗೈಯಗಲ ಜಾಗ ಕೊಡು ಇಡೀ ಪೃಥ್ವಿಯನ್ನೇ ಮೇಲೆತ್ತುವೆಯೆಂದು, ಭಾರ ಎಷ್ಟಿದೆ ಎನ್ನುವುದು ಮುಖ್ಯವಲ್ಲ. ಹೇಗೆ ಹೊತ್ತು ನಿಲ್ಲುತ್ತೇವೆ ಎನ್ನುವುದರ ಆಧಾರದ ಮೇಲೆ ಜೀವನ ನಿಂತಿದೆ.

–ಡಾ. ರಾಜಶೇಖರ ನಾಗೂರ

### ವಚನ ಚಿಂತನ 398



*ಅಖಂಡ ಗೋಳಾಕಾರವಾಗಿರ್ದ ಮಹಾಲಿಂಗವೆ ಅಂಗವಿಡಿದಲ್ಲಿ, ಪ್ರಾಣಲಿಂಗವೆಂದು, ಇಷ್ಟಲಿಂಗವೆಂದು, ಇವೆರಡರ ಸಂಘಟ್ಟ ಭಾವಲಿಂಗವೆಂದು ಅಂಗವ ಕುರಿತು ಮೂರು ತೆರನಾಯಿತ್ತು. ಆಚಾರಾದಿ ಮಹಾಲಿಂಗವೆಂದು ಇಂದ್ರಿಯವ ಕುರಿತು ಆರು ತೆರನಾಯಿತ್ತು. ತತ್ತ್ವವ ಕುರಿತು ಮೂವತ್ತಾರು ತೆರನಾಯಿತ್ತು.*
*ಸ್ಥಲವ ಕುರಿತು ನೂರೊಂದು ತೆರನಾಯಿತ್ತು. ಕರಣವ ಕುರಿತು ಇನ್ನೂರ ಹದಿನಾರಾಯಿತ್ತು. ಇಂತೀ ಪಸರಿಸಿದ ಪರಬ್ರಹ್ಮವೇ ಏಕಮಯವಾಗಿ ನಿಂದುದಕ್ಕೆ ದೃಷ್ಟ : ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ ।*
*ಲಿಂಗಬಾಹ್ಯಾತ್ ಪರಂ ನಾಸ್ತಿ ತಸ್ಮಾಲ್ಲಿಂಗಂ ಪ್ರಪೂಜಯೇತ್ ॥*
*ಇಂತಪ್ಪ ಲಿಂಗವೆ ನೀನಲಾ, ಬಸವಪ್ರಿಯ ಕೂಡಲಚೆನ್ನಸಂಗಮದೇವಾ,ಮಾಂ ತ್ರಾಹಿ,*

ಈ ವಚನದಲ್ಲಿ ಹಡಪದ ಅಪ್ಪಣ್ಣನವರು ಮಹಾಲಿಂಗದ ವಿವಿಧ ಸ್ವರೂಪಗಳು ತಿಳಿಸಿದ್ದಾರೆ. ಅದು ಅಖಂಡ ಗೋಳಾಕಾರವಾಗಿದೆ ಅಂಗದ ಸಂಪರ್ಕದಲ್ಲಿ ಅದು ಮೂರು ನಾಮಗಳನ್ನು (ಇಷ್ಟಲಿಂಗ+ಪ್ರಾಣಲಿಂಗ–ಭಾವಲಿಂಗ) ಧಾರಣ ಮಾಡುತ್ತದೆ. ಆಚಾರಕ್ಕೆ ಬಂದಾಗ ಅದು 6 , 36 , 101 , 216 ನಾಮಗಳನ್ನು ಧಾರಣ ಮಾಡುತ್ತದೆ. ಇಂದ್ರಿಯದೊಂದಿಗೆ ನಾಸಿಕ–ಆಚಾರಲಿಂಗ,ಜಿಹ್ವೆ–ಗುರುಲಿಂಗ,ನೇತ್ರ– ಶಿವಲಿಂಗ, ತ್ವಕ್ಕು–ಜಂಗಮಲಿಂಗ,ಶ್ರೋತ್ರ– ಪ್ರಸಾದ ಲಿಂಗ ಮತ್ತು ಆತ್ಮ–ಮಹಾಲಿಂಗವೆಂದು ಪ್ರಕಟವಾಗು ತ್ತದೆ. ತತ್ವಗಳ ಆದ–ಾರದಲ್ಲಿ 5 ಅಧಿದೇವತೆಗಳು+5 ಶಕ್ತಿಗಳು+5 ಜ್ಞಾನೇಂದ್ರಿಯಗಳು+5 ಕರ್ಮೇಂದ್ರಿಯಗಳು+5 ವಾಯುಗಳು+5 ಮಹಾಭೂತಗಳು+5 ಅಂತಃ–ಕರಣಗಳು+1 ಪರಶಿವ=36 ತತ್ವಗಳ ಹಿನ್ನಲೆಯಲ್ಲಿ ಮಹಾಲಿಂಗವು ವಿವಿಧನಾಮಗಳನ್ನು ಹೊಂದುತ್ತದೆ. ಸ್ಥಲದ ಹಿನ್ನಲೆಯಲ್ಲಿ ಅಂಗ ಷಟಸ್ಥಲ ಮತ್ತು ಲಿಂಗ ಷಟಸ್ಥಲಗಳು ಕ್ರಮವಾಗಿ 44 ಮತ್ತು 57 ಉಪಸ್ಥಲಗಳನ್ನು ಹೊಂದಿದ್ದು ಪ್ರತಿಯೊಂದು ಸ್ಥಲದಲ್ಲಿಯೂ ಮಹಾಲಿಂಗಕ್ಕೆ ಅಂಗ ಮತ್ತು ಲಿಂಗ ಸಂಪರ್ಕದೊಂದಿಗೆ 101 ನಾಮವನ್ನು ಧಾರಣೆ ಮಾಡಲಾಗಿದೆ. ಆತ್ಮ ಆಧಾರಿತ ಕರಣದ ಹಿನ್ನೆಲೆ 216 ವಿವಿಧ ನಾಮಗಳನ್ನು ಹೊಂದಿರುವ ಮಹಾಲಿಂಗ ಅಂಗದೊಳಗೆ ಅಡಗಿರುವ ಚೈತನ್ಯವೇ ಆದಕಾರಣ ಆ ಮಹಾ ಲಿಂಗವೇ ನೀನು ಎಂದು ಎಚ್ಚರಿಸಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ಎಸ್ಸೆಸ್ಸೆಲ್ಸಿ ಪರೀಕ್ಷೆ –2 526 ವಿದ್ಯಾರ್ಥಿಗಳ ಗೈರು

ಉದಯರಶ್ಮಿ ನ್ಯೂಸ್

ವಿಜಯಪುರ: ಶುಕ್ರವಾರ ನಡೆದ ಎಸ್ಸೆಸೆಲ್ಸಿ ಪರೀಕ್ಷೆ –2ರ ಪ್ರಥಮ ಭಾಷೆ ವಿಷಯದಲ್ಲಿ ಜಿಲ್ಲೆಯ ಒಟ್ಟು 4,777 ವಿದ್ಯಾರ್ಥಿಗಳು ನೋಂದಣಿ ಮಾಡಿದ್ದರು. ಇದರಲ್ಲಿ 4,251 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ 526 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪೂರ್ವಭಾವಿ ಸಿದ್ಧತೆ ಕುರಿತು ಸ್ಥಳಕ್ಕೆ ಜಿಲ್ಲಾಧಿಕಾರಿ ಭೇಟಿ – ಪರಿಶೀಲನೆ

## ಇಂಚಗೇರಿ ಗ್ರಾಮಕ್ಕೆ ಜೂ.16ರಂದು ಮುಖ್ಯಮಂತ್ರಿಗಳ ಆಗಮನ

ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲೆಯ ಚಡಚಣ ತಾಲೂಕಿನ ಇಂಚಗೇರಿ ಗ್ರಾಮಕ್ಕೆ ಜೂ.16 ರಂದು ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಆಗಮಿಸಲಿರುವ ಹಿನ್ನಲೆಯಲ್ಲಿ ಜೂ.14ರ ಶುಕ್ರವಾರ ಜಿಲ್ಲಾಧಿಕಾರಿಗಳಾದ ಟಿ.ಭೂಬಾಲನ್ ಅವರು ಸ್ಥಳಕ್ಕೆ ಭೇಟಿ ನೀಡಿ ಪೂರ್ವಸಿದ್ಧತೆ ಕುರಿತು ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ಅಗತ್ಯ ಸಲಹೆ ಸೂಚನೆ ನೀಡಿದರು.



ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಸ್ಥಳಕ್ಕೆ ಭೇಟಿ ನೀಡಿ ಕೈಗೊಂಡಿರುವ ಸಿದ್ಧತೆಗಳ ಪರಿಶೀಲನೆ ನಡೆಸಿ, ಮುಖ್ಯಮಂತ್ರಿಗಳ ಆಗಮನ ಹಿನ್ನಲೆಯಲ್ಲಿ ಎಲ್ಲ ಅಗತ್ಯ ಸಿದ್ಧತೆ ಕೈಗೊಳ್ಳಬೇಕು. ಮುಖ್ಯಮಂತ್ರಿಗಳ ಕಾರ್ಯಕ್ರಮದ ಸಂದರ್ಭದಲ್ಲಿ ಯಾವುದೇ ಲೋಪವಾಗದಂತೆ ಅಗತ್ಯ ಭದ್ರತಾ ವ್ಯವಸ್ಥೆ, ಹೆಲಿಪ್ಯಾಡ್ ವ್ಯವಸ್ಥೆ ಕುರಿತು ಪರಿಶೀಲನೆ ನಡೆಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ಇಂಡಿ ಉಪವಿಭಾಗಾಧಿಕಾರಿ ಆಬಿದ ಗದ್ಯಾಳ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರ ರಾಜು ಮುಜುಮದಾರ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

## ನಟ ದರ್ಶನ ಪ್ರಕರಣ ಸಿಬಿಐಗೆ ಒಪ್ಪಿಸಲು ಕೆ.ಆರ್.ಎಸ್ ಆಗ್ರಹ



ಉದಯರಶ್ಮಿ ನ್ಯೂಸ್

ವಿಜಯಪುರ: ಅಭಿಮಾನಿಯನ್ನೇ ಕೊಲ್ಲುವ ಮೃಗಿಯ ಭಾವನೆ ಹೊಂದಿರುವ ನಟ ದರ್ಶನ ಪ್ರಭಾವಿ ರಾಜಕಾರಣಿಗಳ ಆಪ್ತರಾಗಿದ್ದು ಸಾಕ್ಷಿ ನಾಶದ ಜೊತೆಯಲ್ಲಿ ಪ್ರಕರಣದ ತನಿಖೆಯಲ್ಲಿ ಪ್ರಭಾವ ಬೀರುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಅದು ಅಲ್ಲದೆ ನಟ ದರ್ಶನರವರು ತಮ್ಮನ್ನು ಈ ಪ್ರಕರಣದಿಂದ ಕೈಬಿಟ್ಟರೆ ಕೇಳಿದಷ್ಟು ಹಣ ಕೊಡುವುದಾಗಿ ಪೊಲೀಸ್ ಅಧಿಕಾರಿಗಳಿಗೆ ಆಮಿಷವೊಡ್ಡಿರುವುದು ಮಾಧ್ಯಮಗಳಲ್ಲಿ ಬಿತ್ತರಗೊಂಡಿದೆ. ಹಾಗಾಗಿ ಈ ಪ್ರಕರಣವನ್ನು ರಾಜ್ಯ ಸರ್ಕಾರ ಸಿಬಿಐಗೆ ವಹಿಸಬೇಕೆಂದು ಕೆಆರ್‌ಎಸ್ ಪಕ್ಷವು ವಿಜಯಪುರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವಾನಂದ ಯಡಹಳ್ಳಿ, ಗಣಪತಿ ರಾಠೋಡ, ದೀಪಾ ಮರನೂರ, ದುರ್ಗಪ್ಪ ಬೂದಿಹಾಳ, ಲಕ್ಷ್ಮಣ ಚಡಚಣ, ರಾಕೇಶ ಇಂಗಳಗಿ, ಪ್ರವೀಣ ಕನಸೇ ಇತರರು ಇದ್ದರು.

### ಮೆಟ್ರಿಕ್ ನಂತರದ ಹಿಂದುಳಿದ ವರ್ಗದ ವಸತಿನಿಲಯದಲ್ಲಿನ ಅವ್ಯವಸ್ಥೆ ಖಂಡಿಸಿ ಪ್ರತಿಭಟನೆ

## ಇಂಡಿ: ವಸತಿ ನಿಲಯ ವಿದ್ಯಾರ್ಥಿನಿಯರಿಂದ ರಾಸ್ತಾರೋಕೊ

ಉದಯರಶ್ಮಿ ನ್ಯೂಸ್

ಇಂಡಿ: ಪಟ್ಟಣದ ವಿಜಯಪುರ ರಸ್ತೆಯಲ್ಲಿರುವ ಮೆಟ್ರಿಕ್ ನಂತರದ ಹಿಂದುಳಿದ ವರ್ಗದ ವಸತಿನಿಲಯದ ಬಾಲಕಿಯರು ವಸತಿ ನಿಲಯ ಎದು–ರಿಗೆ ವಿಜಯಪುರ ರಸ್ತೆಯಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವಿದ್ಯಾರ್ಥಿ ಘಟಕದ ನೇತೃತ್ವದ ಅಡಿ ರಾಸ್ತಾರೋಕೊ ಮಾಡಿದರು.




ವಸತಿ ನಿಲಯದಲ್ಲಿ ಕಳೆದ ಎಂಟು ದಿನಗಳಿಂದ ನೀರು ಬಂದಿಲ್ಲ. ವಸತಿ ನಿಲಯದಲ್ಲಿ ಸ್ವಚ್ಛತೆ ಎಂಬುದು ಇಲ್ಲ. ಅಡುಗೆ ಮನೆಯಲ್ಲಿಯೇ ಊಟ ಮಾಡಿ ಉಳಿದಿದ್ದು ಅಲ್ಲಿಯೇ ಒಗೆಯುತ್ತಾರೆ. ತಾಟುಗಳಲ್ಲಿ ಉಳಿದಿದ್ದು ಅಲ್ಲಯೇ ಹಾಕಿ ತೊಳೆಯುತ್ತಾರೆ. ಹೀಗಾಗಿ ಅಡುಗೆ ಮನೆ ಹೊಲಸು ನಾರುತ್ತಿರುತ್ತದೆ. ಅಹಾರ ದಾನ್ಯಗಳು ಮತ್ತು ತರಕಾರಿ ಸಾಮಗ್ರಿಗಳು ಕಳಪೆ ಮಟ್ಟದಿಂದ ಕೂಡಿರುತ್ತವೆ. ಕೆಲವೊಂದು ಅಹಾರ ಧ್ಯಾನ್ಯಗಳಲ್ಲಿ ನುಸಿ ಮತ್ತು ಕಿಡೆಗಳಿದ್ದರೂ ಹಾಗೇ ಸ್ವಚ್ಛ ಮಾಡದೆ ಅಡುಗೆ ಮಾಡುತ್ತಾರೆ. ಸ್ನಾಹ ಗೃಹಗಳು ಸ್ವಚ್ಛತೆಯಿಂದ ಕೂಡಿಲ್ಲ. ಸ್ವಚ್ಛ ಮಾಡಲು ವಸತಿ ನಿಲಯದ ಅಧಿಕಾರಿಗಳಿಗೆ ತಿಳಿಸಿದರೆ ನಿವೇ ಸ್ವಚ್ಛ ಮಾಡಿಕೊಳ್ಳಿ ಎಂದು ಉತ್ತರಿಸುತ್ತಾರೆ ಎಂದರು.

ವಸತಿ ನಿಲಯದ ಮೇಲ್ವಿಚಾರಕರು ಸರಿಯಾಗಿ ಬರುವದಿಲ್ಲ. ಎಲ್ಲವೂ ಕೆಲಸ ಮಾಡುವವರದೇ ಕಾರುಬಾರು. ವಸತಿ ನಿಯಲಕ್ಕೆ ಯಾರು ಬರುತ್ತಾರೆ ಹೋಗುತ್ತಾರೆ ಎಂಬುದಕ್ಕೆ ಏನೂ ವ್ಯವಸ್ಥೆ ಇಲ್ಲ ಎಂದು ಆರೋಪಿಸಿದರು.

ರಾಸ್ತಾ ರೋಕೊದಿಂದ ವಿಜಯಪುರಕ್ಕೆ ಹೋಗುವವರಿಗೆ ತೊಂದರೆ ಉಂಟಾಯಿತು. ಪೋಲಿಸ ವಿಭಾಗದವರು ಬಂದು ವಾಹನಗಳಿಗೆ ಅರ್ಧ ದಾರಿ ಅನುಕೂಲ ಮಾಡಿಕೊಟ್ಟರು.

ಪ್ರತಿಭಟನಾ ಸ್ಥಳಕ್ಕೆ ತಹಸೀಲ್ದಾರ ಮಂಜುಳಾ ನಾಯಕ, ಉಪ ತಹಸೀಲ್ದಾರ ಧನಪಾಲಶೆಟ್ಟಿ,ಸುರೇಶ ಮ್ಯಾಕೇರಿ ಆಗಮಿಸಿ ವಸತಿ ನಿಲಯಕ್ಕೆ ಭೇಟಿ ನೀಡಿದರು.

ವಸತಿ ನಿಲಯ ಮೇಲ್ವಿಚಾರಕರು ರಜೆಯ ಮೇಲಿರುವದಾಗಿ ತಿಳಿಸಿದರು. ಬಿಸಿಎಂ ಅಧಿಕಾರಿ ಮಠಪತಿ ಇವರಿಗೆ ಫೋನು ಮೂಲಕ ಸಂಪರ್ಕಿಸಿದಾಗ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಇರುವದ–ರಿಂದ ಎರಡು ದಿನದಲ್ಲಿ ಎಲ್ಲವೂ ಸರಿಪಡಿಸುವದಾಗಿ ತಿಳಿಸಿದರು.

ಪ್ರತಿಭಟನೆಯಲ್ಲಿ ಅಂಬಿಕಾ ಸಂಗೋಗಿ, ಭಾಗ್ಯಶ್ರೀ ಡೊಳ್ಳಿ, ಲಕ್ಷ್ಮೀ ಮಾನೆ, ದಾನಮ್ಮ ಉಕ್ಕಲಿ, ಪ್ರಿಯಾಂಕಾ ನರಳೆ, ಪೂಜಾ ಕಳಸದ, ಜಾನು ನಾಯ್ಕೋಡಿ ಮತ್ತಿತ–ರಿದ್ದರು.

## ಮುಖ್ಯಮಂತ್ರಿ ಸಿದ್ಧರಾಮಯ್ಯ ವಿಜಯಪುರ ಜಿಲ್ಲಾ ಪ್ರವಾಸ

ಉದಯರಶ್ಮಿ ನ್ಯೂಸ್

ವಿಜಯಪುರ: ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಜೂ.16 ರಂದು ವಿಜಯಪುರ ಜಿಲ್ಲಾ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಜೂ.16ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನಿಂದ ವಿಶೇಷ ವಿಮಾನದ ಮೂಲಕ ಪ್ರಯಾಣ ಬೆಳೆಸಿ, 10–50ಕ್ಕೆ ಬಳ್ಳಾರಿ ಜಿಲ್ಲೆ ತೋರಣಗಲ್ಲು ಏರಸ್ಟ್ರಿಪ್‌ಗೆ ಆಗಮಿಸಿ 10–55ಕ್ಕೆ ಹೆಲಿಕ್ಯಾಪ್ಟರ್ ಮೂಲಕ ಹೊರಟು ಮಧ್ಯಾಹ್ನ 12–10ಕ್ಕೆ ವಿಜಯಪುರ ಜಿಲ್ಲೆಯ ಚಡಚಣ ತಾಲೂಕಿನ ಇಂಚಗೇರಿ ಗ್ರಾಮದ ಹೆಲಿಪ್ಯಾಡ್‌ಗೆ ಆಗಮಿಸಿ, ಇಂಚಗೇರಿ ಮಠದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೂರ್ತಿ ಪುಷ್ಪಾರ್ಚನೆ ಕಾರ್ಯಕ್ರಮ ಹಾಗೂ ನಿಜರಾಜಯೋಗಿ ಶ್ರೀ ಸಮರ್ಥ ಸದ್ಗುರು ಶ್ರೀ ಮಾಧವಾನಂದ ಪ್ರಭುಗಳ ದೇವಸ್ಥಾನ ಲೋಕಾರ್ಪಣೆ, ಕಳಸಾರೋಹಣ ಮತ್ತು 44ನೇ ಪುಣ್ಯತಿಥಿ ಸಪ್ತಾಹದಲ್ಲಿ ಭಾಗವಹಿಸಲಿದ್ದಾರೆ.



ಮಧ್ಯಾಹ್ನ 3 ಗಂಟೆಗೆ ಇಂಚಗೇರಿ ಹೆಲಿಪ್ಯಾಡ್‌ದಿಂದ ಹೆಲಿಕ್ಯಾಪ್ಟರ್ ಮೂಲಕ ಬೆಂಗಳೂರಿಗೆ ಮರು ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಉದಯ ರಶ್ಮಿ
ಪ್ರತಿ ಮನೆ-ಮನದ ಸಂಗಾತಿ

## ಎಂ.ಟೆಕ್‌ನಲ್ಲಿ ಅಜರ್‌ಗೆ ಪ್ರಥಮ ಸ್ಥಾನ



**ಉದಯರಶ್ಮಿ ನ್ಯೂಸ್**

ಸಿಂದಗಿ: ಪಟ್ಟಣದ ಯುವಕ ವಿಜಯಪುರ ಜಿಲ್ಲೆಯ ಪ್ರತಿಷ್ಠಿತ ಸಂಸ್ಥೆಯಾದ ಸಿಕ್ಯಾಬ್ ಇನ್ಸಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಜಲಿ ಕಾಲೇಜಿನ ವಿದ್ಯಾರ್ಥಿ ಅಜರ್‌ಫಜಲ್‌ಅಹಮ್ಮದ ಮುಲ್ಲಾ 2023–24ನೆಯ ಸಾಲಿನ ಎಮ್.ಟೆಕ್ ಪದವಿಯಲ್ಲಿ ಮಹಾವಿದ್ಯಾಲಯಕ್ಕೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣಗೊಂಡು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ವಿದ್ಯಾರ್ಥಿಯ ಈ ಸಾಧನೆಗೆ ಸಿಕ್ಯಾಬ್ ಸಂಸ್ಥೆಯ ಅಧ್ಯಕ್ಷ ಎಸ್.ಎ.ಪುಣೆಕರ್, ಕಾರ್ಯದರ್ಶಿ ಎ.ಎಸ್.ಪಾಟೀಲ, ನಿರ್ದೇಶಕ ಮಂಡಳಿ, ಪ್ರಾಚಾರ್ಯ ಡಾ.ಸೈಯದ್ ಅಬ್ಬಾಸಲಿ ಹಾಗೂ ಕಾಲೇಜಿನ ಬೋಧಕ–ಬೋಧಕೇತರ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

## ಅಧಿಕಾರ ಸ್ವೀಕರಿಸಿದ ಡಾ.ಚನ್ನಪ್ಪ ಕಟ್ಟಿ



**ಉದಯರಶ್ಮಿ ನ್ಯೂಸ್**

ಸಿಂದಗಿ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಹಿರಿಯ ಸಾಹಿತಿ, ಕಥೆಗಾರ, ವಿಮರ್ಶಕ ಡಾ.ಚನ್ನಪ್ಪ ಕಟ್ಟಿ ಅಧಿಕಾರ ಸ್ವೀಕರಿಸಿದರು.

## ರಕ್ತದಾನ ನಿಸ್ವಾರ್ಥ ಸೇವೆ ಡಾ.ರಾಠೋಡ




**ಉದಯರಶ್ಮಿ ನ್ಯೂಸ್**

ಇಂಡಿ: ವಿಶ್ವ ರಕ್ತದಾನಿಗಳ ದಿನದ ಜಾಗತಿಕ ಧ್ಯೇಯವು ಪ್ರತಿ ವರ್ಷವೂ ತಮ್ಮ ರಕ್ತವನ್ನು ತಮಗೆ ತಿಳಿದಿಲ್ಲದ ಜನರಿಗಾಗಿ ದಾನ ಮಾಡುವ ನಿಸ್ವಾರ್ಥ ವ್ಯಕ್ತಿಗಳನ್ನು ಗುರುತಿಸುತ್ತದೆ ಎಂದು ಡಾ. ಪಿ.ಕೆ. ರಾಠೋಡ ಹೇಳಿದರು.

ಪಟ್ಟಣದ ಜಿ.ಆರ್.ಗಾಂಧಿ ಕಲಾ, ವಾಯ್.ಎ.ಪಾಟೀಲ ವಾಣಿಜ್ಯ ಹಾಗೂ ಎಮ್.ಪಿ.ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ ರೆಡ್ ಕ್ರಾಸ್, ಸ್ಕೌಟ್ಸ್ ಗೈಡ್ಸ್, ಎನೆಸ್ಸೆಸ್ ಮತ್ತು ಜೀವಶಾಸ್ತ್ರ ವಿಭಾಗ ಅಡಿದಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರತಿ ವರ್ಷ ಪ್ರಪಂಚದಾದ್ಯಂತದ ದೇಶಗಳು ಜೂನ್ 14 ರಂದು ವಿಶ್ವ ರಕ್ತದಾನಿಗಳ ದಿನವನ್ನು ಆಚರಿಸುತ್ತವೆ. ಸುರಕ್ಷಿತ ರಕ್ತ ಮತ್ತು ರಕ್ತದ ಉತ್ಪನ್ನಗಳ ಅಗತ್ಯತೆಯ ಅರಿವು ಮೂಡಿಸಲು ಮತ್ತು ಸ್ವಯಂಪ್ರೇರಿತ, ಪಾವತಿಸದ ರಕ್ತದ ದಾನಿಗಳಿಗೆ ತಮ್ಮ ಜೀವ ಉಳಿಸುವ ರಕ್ತಕ್ಕಾಗಿ ಧನ್ಯವಾದಗಳನ್ನು ನೀಡಲು ಈವೆಂಟ್ ಕಾರ್ಯನಿರ್ವಹಿಸುತ್ತದೆ. ರೋಗಿಗಳಿಗೆ ಸುರಕ್ಷಿತ ರಕ್ತ ಮತ್ತು ರಕ್ತದ ಉತ್ಪನ್ನಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಪ್ರವೇಶವನ್ನು ನೀಡುವ ರಕ್ತದ ಸೇವೆಯು ಪರಿಣಾಮಕಾರಿ ಆರೋಗ್ಯ ವ್ಯವಸ್ಥೆಯ ಪ್ರಮುಖ ಅಂಶವಾಗಿದೆ ಎಂದರು.

ಶ್ವೇತಾ ಕಾಂತ, ಮಲ್ಲಿಕಾರ್ಜುನ ಕೊಣದೆ, ಡಾ. ಶ್ರೀಕಾಂತ ರಾಠೋಡ ಅವರು ಮಾತನಾಡಿದರು.

ಡಾ.ಆನಂದ ಸಿ. ನಡವಿನಮನಿ, .ಶ್ರೀಶೈಲ, ಡಾ.ಸಿ.ಎಸ್.ಬಿರಾದಾರ, ಶೃತಿ ಪಾಟೀಲ, ಪಂಕಜಾ ಕುಲಕರ್ಣಿ, ಶೃತಿ ಬಿರಾದಾರ ಬಲರಾಮ ವಡ್ಡರ ಮತ್ತಿತರಿದ್ದರು.

## ಸಾವಳಸಂಗ ಅರಣ್ಯ ಪ್ರದೇಶಕ್ಕೆ ಜಿಲ್ಲಾಧಿಕಾರಿ ಭೇಟಿ



**ಉದಯರಶ್ಮಿ ನ್ಯೂಸ್**

ಇಂಡಿ: ತಾಲೂಕಿನ ಅರಣ್ಯ ಪ್ರದೇಶ ಸಾವಳಸಂಗ ಗುಡ್ಡಕ್ಕೆ ವಿಜಯಪುರ ಜಿಲ್ಲಾಧಿಕಾರಿ ಟಿ.ಭೂಬಾಲನ್ ಭೇಟಿ ನೀಡಿದರು.

ಅಲ್ಲಿ ಹೊಸದಾಗಿ ನಿರ್ಮಿಸುವ ಅಂತರ ರಾಷ್ಟ್ರೀಯ ಗುಡ್ಡಗಾಡು ಸೈಕ್ಲಿಂಗ್ ಪಾರ್ಕ ಕುರಿತು ಸೈಕ್ಲಿಂಗ್ ಸಂಘದ ಅಧ್ಯಕ್ಷ ದೇಸಾಯಿ ಇವರ ಜೊತೆ ಚರ್ಚೆ ನಡೆಸಿ ಸ್ಥಳ ಪರಿಶೀಲನೆ ನಡೆಸಿದರು.

ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ಸಾವಳಸಂಗ ಅರಣ್ಯ ಪ್ರದೇಶವನ್ನು ಪ್ರವಾಸಿ ತಾಣವಾಗಿ ಮಾಡಬೇಕು. ಟ್ರೀ ಪಾರ್ಕ, ಜಿಪಲಾಯಿನ್, ರೋಪವಾಕ್ ಮತ್ತು ಸಾಹಸಮಯ ಕ್ರೀಡೆಗಳಿಗೆ ಪ್ರೋತ್ಸಾಹಿಸುವ ಕ್ರೀಡಾ ಸ್ಥಳಗಳನ್ನು ನಿರ್ಮಿಸಲು ಕೇಳಿಕೊಂಡರು.

ಸಾವಳಸಂಗದಲ್ಲಿ ಅರಣ್ಯ ಪ್ರದೇಶ ಹೆಚ್ಚಿಸಲು ಖಾಸಗಿಯವರು ತಮ್ಮ ಜಮೀನು ಮಾರುವವರಿದ್ದರೆ ಈ ಕುರಿತು ಪರಿಶೀಲಿಸಲು ತಿಳಿಸಿದರು.

ನಂತರ ಅಮೃತ ಸರೋವರ ಪ್ರದೇಶವನ್ನು ವೀಕ್ಷಿಸಿದರು.

ಜಿ.ಪಂ ಸಿಇಓ ರಿಷಿ ಆನಂದ, ಜಿಲ್ಲಾ ಪೋಲಿಸ ವರಿಷ್ಠಾಧಿಕಾರಿ ರಿಸಿಕೇಶ ಭಗವಾನ, ಇಂಡಿ ಕಂದಾಯ ಉಪವಿಬಾಗಾಧಿಕಾರಿ ಅಬೀದ್ ಗದ್ಯಾಳ, ವಲಯ ಅರಣ್ಯಾಧಿಕಾರಿ ಮಂಜುನಾಥ ಧುಳೆ, ಇಓ ಸಂಜಯ ಖಡಗೇಕರ, ಚಡಚಣ ತಹಸೀಲ್ದಾರ ಸಂಜಯ ಇಂಗಳೆ,ಸಾಹಿಲ್ ಧನಶೆಟ್ಟಿ, ವಿನೋದ ಸಜ್ಜನ, ರಾಮಗೌಡ ಸರಬಡಗಿ, ಪಿಡಿಓ ಸಿದ್ದು ಲೋಣಿ, ಗ್ರಾ.ಪಂ ಅಧ್ಯಕ್ಷ,ಉಪಾಧ್ಯಕ್ಷರು ಮತ್ತಿತರಿದ್ದರು.

## ಜೂ.16ರಂದು ದಿ.ಭೀಮರಾಯಗೌಡ ಸ್ಮರಣಾರ್ಥ ಪ್ರತಿಭಾ ಪುರಸ್ಕಾರ



**ಉದಯರಶ್ಮಿ ನ್ಯೂಸ್**

ಸಿಂದಗಿ: ನಗರದ ಬಿಎನ್‌ಬಿ ಫೌಂಡೇಶನ್ ವತಿಯಿಂದ ಜೂ.16ರಂದು ಭಾನುವಾರ ಬೆಳಿಗ್ಗೆ 10:30ಗಂಟೆಗೆ ವಿಜಯಪುರ ರಸ್ತೆಯ ಮಾಂಗಲ್ಯ ಭವನದಲ್ಲಿ ದಿ.ಭೀಮರಾಯಗೌಡ ಬಿರಾದಾರ, ಮಾಗಣಗೇರಿ ಅವರ ಸ್ಮರಣಾರ್ಥವಾಗಿ ಸಿಂದಗಿ ಮತ್ತು ಆಲಮೇಲ ತಾಲೂಕಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಿಎನ್‌ಬಿ ಫೌಂಡೇಶನ್ ಅಧ್ಯಕ್ಷ ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ ತಿಳಿಸಿದ್ದಾರೆ.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಿಜಯಪುರ ವನಶ್ರೀ ಸಂಸ್ಥಾನ ಮಠದ ಡಾ. ಜಯಬಸವ ಕುಮಾರ ಸ್ವಾಮಿಗಳು, ಯಂಕಂಚಿಯ ಅಭಿನವ ರುದ್ರಮುನಿ ಶಿವಾಚಾರ್ಯರು, ಆಲಮೇಲ ವಿರಕ್ತಮಠದ ಜಗದೇವ ಮಲ್ಲಿಬೊಮ್ಮಯ್ಯ ಮಹಾಸ್ವಾಮಿಗಳು, ಕನ್ನೊಳ್ಳಿಯ ಸಿದ್ದಲಿಂಗ ಶಿವಾಚಾರ್ಯರು, ದೇವದುರ್ಗ ವೀರಗೋಟಿ ಮಠದ ಅಡವಿಲಿಂಗ ಮಹಾರಾಜರು ವಹಿಸಿಕೊಳ್ಳಲಿದ್ದಾರೆ. ಉದ್ಘಾಟಕರಾಗಿ ವಿಜಯಪುರ ಸಂಸದ ರಮೇಶ ಜಿಗಜಿಣಗಿ ಆಗಮಿಸಿಲಿದ್ದಾರೆ. ಬೆಳಗಾವಿ ಜಿಲ್ಲಾಧಿಕಾರಿ ನಿತೀಶ ಪಾಟೀಲ ಗೌರವ ಉಪಸ್ಥಿತಿ ಇರಲಿದ್ದಾರೆ. ಅಧ್ಯಕ್ಷತೆಯನ್ನು ಮಾಜಿ ಶಾಸಕ ರಮೇಶ ಭೂಸನೂರ ವಹಿಸಿಕೊಳ್ಳಲಿದ್ದಾರೆ. ಫೋಟೋ ಪೂಜೆಯನ್ನು ಶಾಸಕ ಅಶೋಕ ಮನಗೂಳಿ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಜೇವರ್ಗಿ ಶಾಸಕ ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯಸಿಂಗ್, ಇಂಡಿ ಶಾಸಕ ಯಶವಂತ್ರಾಯಗೌಡ ಪಾಟೀಲ, ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ, ಮಾಜಿ ವಿಪ ಸದಸ್ಯ ಅರುಣ ಶಹಾಪೂರ, ನಿತೀನ ಗುತ್ತೇದಾರ, ಗುರಣ್ಣಗೌಡ ಬಿರಾದಾರ, ಪರಶುರಾಮ ಮನಗೂಳಿ ಇರಲಿದ್ದಾರೆ. ಸಾಹಿತಿ ಶಿವಶರಣಪ್ಪ ಶಿರೂರ ಉಪನ್ಯಾಸ ನೀಡಲಿದ್ದಾರೆ ಎಂದು ಕಾರ್ಯದರ್ಶಿ ಬಸವರಾಜಗೌಡ ಬಿರಾದಾರ, ಸಿದ್ದನಗೌಡ ಬಿರಾದಾರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರ ಪ್ರವಾಸ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ ಅವರು ಜೂ. 19ರಿಂದ 21ರವರೆಗೆ ವಿಜಯಪುರ ಜಿಲ್ಲಾ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಜೂ.19ರಂದು ಬೆಳಿಗ್ಗೆ 6ಗಂಟೆಗೆ ವಿಜಯಪುರಕ್ಕೆ ಆಗಮಿಸಿ, ಅಂದು ಬೆಳಿಗ್ಗೆ 8 ರಿಂದ ರಾತ್ರಿ 8 ಗಂಟೆಯವರೆಗೆ ವಸತಿ ಶಾಲೆ, ವಸತಿ ನಿಲಯ, ಜಿಲ್ಲಾ ಆಸ್ಪತ್ರೆ ಅಂಗನವಾಡಿ, ಮಕ್ಕಳ ಪಾಲನಾ ಸಂಸ್ಥೆ ಹಾಗೂ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಜೂ.20ರಂದು ಬೆಳಿಗ್ಗೆ 10–30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಕ್ಕಳ ರಕ್ಷಣಾ ವ್ಯವಸ್ಥೆ ಕುರಿತು ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಂಜೆ 6 ಗಂಟೆಗೆ ವಿಜಯಪುರದಿಂದ ಸಿಂದಗಿಗೆ ಪ್ರಯಾಣ ಬೆಳೆಸಿ, ರಾತ್ರಿ 8 ಗಂಟೆಗೆ ಸಿಂದಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪರಿಶೀಲನೆ ನಡೆಸಿ, ಮಕ್ಕಳೊಂದಿಗೆ ಊಟ ಮತ್ತು ವಾಸ್ತವ್ಯ ಮಾಡಲಿದ್ದಾರೆ.

ಜೂ.21ರಂದು ಬೆಳಿಗ್ಗೆ 6 ಗಂಟೆಗೆ ಮಕ್ಕಳೊಂದಿಗೆ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಬೆಳಿಗ್ಗೆ 8 ಗಂಟೆಗೆ ಸಿಂದಗಿಯಿಂದ ಬೀದರ್ ಜಿಲ್ಲೆಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಡಾ:ರಿಚರ್ಡ್ ವಿನ್ಸೆಂಟ್ ಡಿಸೋಜ್ ಜಿಲ್ಲಾ ಪ್ರವಾಸ

**ಉದಯರಶ್ಮಿ ನ್ಯೂಸ್**

ವಿಜಯಪುರ: ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಸರ್ಕಾರದ ಕಾರ್ಯದರ್ಶಿಗಳಾದ ವಿಜಯಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ರಿಚರ್ಡ್ ವಿನ್ಸೆಂಟ್ ಡಿಸೋಜ ಜೂ.14 ರಿಂದ 16ರವರೆಗೆ ವಿಜಯಪುರ ಜಿಲ್ಲಾ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಜೂ.14ರಂದು ರಾತ್ರಿ ವಿಜಯಪುರಕ್ಕೆ ಆಗಮಿಸಿ ವಾಸ್ತವ್ಯ ಮಾಡಲಿದ್ದಾರೆ. ಜೂ.15 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯುವ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ನಂತರ ಸ್ಥಳೀಯ ಪರಿಶೀಲನೆ ನಡೆಸಿ, ವಿಜಯಪುರದಲ್ಲಿ ವಾಸ್ತವ್ಯ ಮಾಡಲಿದ್ದಾರೆ.

ಜೂ.16ರಂದು ಬೆಳಿಗ್ಗೆ 10 ಗಂಟೆಗೆ ಸ್ಥಳೀಯ ಪರಿಶೀಲನೆ ನಡೆಸಿ ನಂತರ ಬೆಂಗಳೂರಿಗೆ ಮರು ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.






## ಜಾನುವಾರುಗಳಿಗೆ ಮೇವು ಪೂರೈಸಿ ಜನ್ಮದಿನಾಚರಣೆ

**ಉದಯರಶ್ಮಿ ನ್ಯೂಸ್**

ಕೊಲ್ಹಾರ: ಸಮಾಜದಲ್ಲಿ ರಾಜಕೀಯ ಗಣ್ಯರು ವ್ಯಾಪಾರಸ್ಥರು ಉದ್ಯಮಿಗಳು, ಯುವ ನೇತಾರರು ತಮ್ಮಗಳ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಡಂಬರದ ಸಾರ್ವಜನಿಕರಿಗೆ ಪ್ರತಿಷ್ಠೆ ತೋರಿಸುವ ಸಲುವಾಗಿ ಆಚರಣೆ ಮಾಡಿಕೊಳ್ಳುವ ಇಂದಿನ ದಿನಮಾನಗಳಲ್ಲಿ ಕೊಲ್ಹಾರದ ದೇಸಗತಿ ಮನೆತನದ ಯುವ ಮುಖಂಡರಾದ ವಿನೀತಕುಮಾರ ದೇಸಾಯಿಯವರು ತಮ್ಮ 35ನೇ ಹುಟ್ಟುಹಬ್ಬವನ್ನು ಶುಕ್ರವಾರ ವಿಶಿಷ್ಟ ರೀತಿಯಲ್ಲಿ ಆಚರಣೆ ಮಾಡಿಕೊಂಡಿದ್ದಾರೆ.

ನಸುಕಿನ ಜಾವ ನಾಲ್ಕು ಘಂಟೆಗೆ ಬಾಗಲಕೋಟ ಜಿಲ್ಲೆಯ ಮುಚಖಂಡಿ ಗ್ರಾಮದಲ್ಲಿರುವ ಬಸವೇಶ್ವರ ಸಂಸ್ಥೆಯ ಗೋಶಾಲೆಗೆ ತೆರಳಿ ಸುಮಾರು 11 ಸಾವಿರ ರೂಪಾಯಿಯ ಮೇವು ಖರೀದಿ ಮಾಡಿ 160 ಜಾನುವಾರುಗಳಿಗೆ ತಾವೇ ಖುದ್ದಾಗಿ ಮೇವಿನ ಆಹಾರವನ್ನು ಪೂರೈಕೆ ಮಾಡಿದರು ಅದರಂತೆ ಬೆಂಗಳೂರಿನ ಇಸ್ಕಾನ್ ಸಂಸ್ಥೆಯವರು ನಡೆಸಿಕೊಂಡು ಬರುತ್ತಿರುವ ಅನಾಥಾಶ್ರಮಕ್ಕೆ 11 ಸಾವಿರ ರೂಪಾಯಿಗಳ ದೇಣಿಗೆಯನ್ನು ನೀಡಿದರು. ಬಾದಾಮಿ ಬನಶಂಕರಿ ದೇವಸ್ಥಾನಕ್ಕೆ ತೆರಳಿ ಆಡಳಿತ ಮಂಡಳಿಗೆ ದೇವಸ್ಥಾನದ



ಜೀರ್ಣೋದ್ದಾರಕ್ಕಾಗಿ ಸಹಾಯ ಮಾಡಿರುವದು ಅದ್ದೂರಿಯಾಗಿ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುವ ಜನರಿಗೆ ಇವರು ಮಾಡಿರುವ ಕಾರ್ಯ ಆದರ್ಶ ಪ್ರಾಯವಾಗಿದೆ.

ಕುಟುಂಬವ್ಯವಸ್ಥೆಯಲ್ಲಿ ಬದುಕುವಾಗ ಸಮಾಜದ ಮಧ್ಯದಲ್ಲಿ ನಾವುಗಳು ನಡೆದುಕೊಳ್ಳುವ ರೀತಿ ಪರೋಪಕಾರಂ ಇದಂ ಶರೀರಂ ಎನ್ನುವ ರೀತಿಯಲ್ಲಿ ಕೊಲ್ಹಾರದ ದೇಸಗತಿ ಮನೆತನದವರು ಬಡವರ ದೀನ ದಲಿತರ ಕೂಲಿ ಕಾರ್ಮಿಕರಿಗೆ ಮೊದಲಿನಿಂದಲೂ ತಮ್ಮದೇ ಆದ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದು ಅಂತಹ ಮನೆತನದ ವಿನೀತಕುಮಾರ ದೇಸಾಯಿಯವರಿಂದ ಮತ್ತಷ್ಟು ದಾನ ಧರ್ಮ, ನ್ಯಾಯ, ಸತ್ಕಾರ್ಯಗಳು ಜರುಗವಂತಾಗಲಿ ಎಂದು ಹಿರೇಮಠದ ಪ್ರಭುಕುಮಾರ ಶಿವಾಚಾರ್ಯರ ಆಶಯವಾಗಿದೆ.

ಈ ವೇಳೆ ಮುರುಘೇಂದ್ರ ಮಹಾಸ್ವಾಮಿಗಳು, ಈರಪ್ಪ ಗಿಡ್ಡಪ್ಪಗೋಳ, ಚನ್ನಪ್ಪ ಬಗಲಿ, ರಾಕೇಶ ಕೆಳಗಿನಮನಿ ಉಪಸ್ಥಿತರಿದ್ದರು.

## ಬಿತ್ತನೆಬೀಜ–ರಸಗೊಬ್ಬರ ಕೊರತೆಗೆ ಕ್ರಮಕ್ಕೆ ಬಂಗಾರೆಮ್ಮ ಆಗ್ರಹ



**ಉದಯರಶ್ಮಿ ನ್ಯೂಸ್**

ದೇವರ ಹಿಪ್ಪರಗಿ: ಕಳೆದ ಹಲವಾರು ದಿನಗಳಿಂದ ತಾಲೂಕಿನಲ್ಲಿ ಉತ್ತಮ ಮಳೆಯಾಗುತ್ತಿದ್ದು, ರೈತರಿಗೆ ಬಿತ್ತನೆ ಬೀಜ ಮತ್ತು ರಸಗೊಬ್ಬರ ಸಮರ್ಪಕವಾಗಿ ಪೂರೈಸಲು ಅಗತ್ಯ ದಾಸ್ತಾನು ಕ್ರಮ ಕೈಗೊಳ್ಳಬೇಕು ಎಂದು ಹುಣಶ್ಯಾಳ ಗ್ರಾಪಂ ಮಾಜಿ ಅಧ್ಯಕ್ಷೆ ಬಂಗಾರೇಮ್ಮ ಮಾನಪ್ಪ ದೊಡಮನಿ ತಹಶೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿ, ಆಗ್ರಹಿಸಿದ್ದಾರೆ.

ಮನವಿ ಸಲ್ಲಿಸಿ ಮಾತನಾಡಿ, ಯಾವುದೇ ಕಾರಣಕ್ಕೂ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಕೊರತೆ ಉಂಟಾಗದಂತೆ ತಾಲೂಕು ಕೃಷಿ ಅಧಿಕಾರಿಗಳು ಹಾಗೂ ತಾಲೂಕು ಆಡಳಿತ ಕ್ರಮ ಕೈಗೊಳ್ಳಬೇಕು, ಅಗತ್ಯ ಪ್ರಮಾಣದಲ್ಲಿ ದಾಸ್ತಾನು ಸಂಗ್ರಹಿಸುವ ಕಾರ್ಯವಾಗಬೇಕು, ತಾಲೂಕಿನ ಕೊನೆಯ ಭಾಗದ ರೈತರಿಗೂ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಕೊರತೆಯಾಗದಂತೆ ನೋಡಿಕೊಳ್ಳಬೇಕು ಎಂದರು.

ಬೀಜ ರಸಗೊಬ್ಬರಗಳಿಗೆ ಸರ್ಕಾರ ನಿಗದಿ ಮಾಡಿದ ದರಕ್ಕಿಂತ ಹೆಚ್ಚಿನ ಹಣವನ್ನು ರೈತರಿಂದ ವಸೂಲಾತಿ ಮಾಡುತ್ತಿರುವುದು ಕಂಡು ಬಂದರೆ ಅಂತಹ ಅಧಿಕಾರಿ, ಸಿಬ್ಬಂದಿ ಹಾಗೂ ಮಧ್ಯವರ್ತಿಗಳ ವಿರುದ್ಧ ಹಾಗೂ ನಕಲಿ ಬೀಜ ಹಾಗೂ ರಸಗೊಬ್ಬರಗಳ ಮಾರಾಟ ಮಾಡುವವರ ಪತ್ತೆ ಹಚ್ಚಿ ಕ್ರಮ ಕೈಗೊಳ್ಳಬೇಕು.

ರೆಂಟೆ ಸಮಗೊಳಿಸುವ, ಬಿತ್ತನೆಗೆ ಅನುಕೂಲವಾಗುವಂತಹ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಲಭ್ಯತೆಯ ಕುರಿತು ಪ್ರಸಾರ ಪಡಿಸಿ ಸಬ್ಸಿಡಿ ದರದಲ್ಲಿ ಹೆಚ್ಚು ರೈತರಿಗೆ ತಲುಪಿಸಲು ಅನುಕೂಲವಾಗುವಂತೆ ಕೃಷಿ ಇಲಾಖೆ ಅಧಿಕಾರಿಗಳು ಗಮನವಹಿಸಬೇಕು.

ಸರಕಾರದ ಮಾರ್ಗ ಸೂಚಿಂಯಂತೆ ರಸಗೊಬ್ಬರದ ಮಳಿಗೆಗಳಲ್ಲಿ ದಾಸ್ತಾನು ದರಪಟ್ಟಿ ಹಾಕಿದಿರುವುದು, ಬೀಜ, ರಸಗೊಬ್ಬರಗಳು ಖರೀದಿಸಿದರೆ, ಬೇರೆ ಗೊಬ್ಬರಗಳು ಕಡ್ಡಾಯವಾಗಿ ಖರೀದಿಸಬೇಕು ಎನ್ನುವವರ ಹಾಗೂ ರಸೀದಿ ಕೊಡದಿರುವುದರ ಕುರಿತು ಇದೆಲ್ಲಕ್ಕೂ ಕೃಷಿ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

## ಸಂಸದ ಜಿಗಜಿಣಗಿಯವರಿಗೆ ಕೇಂದ್ರ ಸಚಿವ ಸ್ಥಾನ ನೀಡಲು ಆಗ್ರಹ



**ಉದಯರಶ್ಮಿ ನ್ಯೂಸ್**

ವಿಜಯಪುರ: ಸಂಸದ ರಮೇಶ ಜಿಗಜಿಣಗಿಯವರನ್ನು ಕೇಂದ್ರ ಸಂಪುಟ ದರ್ಜೆಯ ಸಚಿವ ಸ್ಥಾನಕ್ಕೆ ಪರಿಗಣಿಸಬೇಕೆಂದು ಭಾರತಿಯ ಜನತಾ ಪಕ್ಷದ ಎಸ್.ಸಿ.ಮೋರ್ಚಾ ಉಪಾದ್ಯಕ್ಷ ವಿಠ್ಠಲ ನಡುವಿನಕೇರಿ ಮನವಿ ಮಾಡಿದ್ದಾರೆ.

ಈ ಕುರಿತು ಶುಕ್ರವಾರ ಪತ್ರಿಕಾ ಹೇಳಿಕೆ ನೀಡಿದ ಅವರು, ರಮೇಶ ಜಿಗಜಿಣಗಿಯವರು ರಾಜಕೀಯ ಜೀವನದಲ್ಲಿ ಹಲವಾರು ಹುದ್ದೆಗಳನ್ನು ನಿಭಾಯಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರು ಕಂದಾಯ ಅಬಕಾರಿ, ಸಮಾಜ ಕಲ್ಯಾಣ ಸಚಿವರಾಗಿ, ಗೃಹ ಸಚಿವರಾಗಿ ಹಲವಾರು ಮಹತ್ತರ ಅಭಿವೃದ್ದಿ ಕೆಲಸಗಳನ್ನು ಮಾಡಿದ ಹೆಮ್ಮೆ ಇವರದು ಇನ್ನು ಸತತವಾಗಿ 7 ಬಾರಿ ಸಂಸದರಾಗಿ ಆಯ್ಕೆಯಾಗಿ ಬಿಜೆಪಿಗೆ ತಮ್ಮ ಆದ ಕೊಡುವೆಯನ್ನು ನೀಡಿದ್ದಾರೆ. ದಕ್ಷಿಣ ಭಾರತದಲ್ಲಿಯೇ ದಲಿತ ನಾಯಕರಾಗಿ ಇವರು ಆಯ್ಕೆಗೊಂಡಿರುವದು ಎಲ್ಲ ದಲಿತ ಸಮುದಾಯಕ್ಕೆ ಹಾಗೂ ಇನ್ನುಳಿದ ಸಮದಾಯಕ್ಕೆ ಹರ್ಷವನ್ನುಂಟು ಮಾಡಿದೆ.

ಇವರು ತಮ್ಮ ರಾಜಕೀಯ ಜೀವನದಲ್ಲಿ ಅಜಾತ ಶತ್ರು ಆಗಿ ಹೊರಹೊಮ್ಮಿದ ನಾಯಕರಾಗಿದ್ದಾರೆ. ವಿಜಯಪುರ ಜಿಲ್ಲೆಯಲ್ಲಿ ಬಿಜೆಪಿಯಲ್ಲಿ ಕಟ್ಟಿ ಬೆಳೆಸುವಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಈ ಹಿಂದೆ ಕೇಂದ್ರ ಸಚಿವರಾದ ಸಮಯದಲ್ಲಿ 1 ಲಕ್ಷ ಕೋಟಿ ರೂ.ಗಳ ಅನುದಾನವನ್ನು ಪಡೆದುಕೊಂಡು ಜಿಲ್ಲೆಯ ಅಭಿವೃದ್ದಿಗೆ ಶ್ರಮಿಸಿದ್ದಾರೆ.

ಇಂತಹ ಮುತ್ಸದ್ದಿ ನಾಯಕ ರಮೇಶ ಜಿಗಜಿಣಗಿಯವರ ಕೊನೆಯ ಚುನಾವಣೆ ಹಾಗೂ ಅನುಭವಿಗಳಾದ ಇವರಿಗೆ ಗೌರವ ನೀಡುವುದರೊಂದಿಗೆ ಎನ್.ಡಿ.ಎ. ನೇತೃತ್ವದ ಬಿಜೆಪಿ ಸರಕಾರದ ಸಚಿವ ಸಂಪುಟದಲ್ಲಿ ಸಂಪುಟ ದರ್ಜೆಯ ಸಚಿವರಾಗಿ ನೇಮಕಗೊಳಿಸಿ ವಿಜಯಪುರ ಜಿಲ್ಲೆಗೆ ನ್ಯಾಯ ಒದಗಿಸಿಕೊಡಬೇಕೆಂದು ವಿಠ್ಠಲ ಶಿವಲಿಂಗಪ್ಪ ನಡುವಿನಕೇರಿ ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿಕೊಂಡಿದ್ದಾರೆ.

## ಐವರು ಐಎಎಸ್ ಅಧಿಕಾರಿಗಳ ವರ್ಗಾವಣೆ



ಬೆಂಗಳೂರು : ರಾಜ್ಯ ಸರಕಾರವು ಐವರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಶುಕ್ರವಾರ ಆದೇಶ ಹೊರಡಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್ ಟಿ.ಕೆ. ಅವರನ್ನು ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ.

ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ಹರ್ಷ ಗುಪ್ತ ಅವರನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ, ವಿಪುಲ್ ಬನ್ಸಾಲ್ ಅವರನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಾರ್ಯದರ್ಶಿಯಾಗಿ, ರಮ[illegible]ದೀಪ್ ಚೌಧರಿ ಅವರನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಕಾರ್ಯಶಿಯಾಗಿ ವರ್ಗಾವಣೆ ಮಾಡಲಾಗಿದೆ.

ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕುಮಾರ್ ಟಿ.ಎಚ್. ಎಂ. ಅವರನ್ನು ಅವರನ್ನು ಜವಳಿ ಅಭಿವೃದ್ಧಿ ಆಯುಕ್ತ ಹಾಗೂ ಕೈಮಗ್ಗ ಮತ್ತು ಜವಳಿ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು ನಗರ ಪೂರ್ವ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಆರ್.ಜೈನ್ ಅವರನ್ನು ಸಂಚಾರ ಪೂರ್ವ ವಿಭಾಗದ ಡಿಸಿಪಿಯಾಗಿ ಹಾಗೂ ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ಡಿ.ದೇವರಾಜ ಅವರನ್ನು ಪೂರ್ವ ವಿಭಾಗದ ಡಿಸಿಪಿಯಾಗಿ ವರ್ಗಾವಣೆ ಮಾಡಿ ಸರಕಾರ ಆದೇಶ ಹೊರಡಿಸಿದೆ.

## ಜೂ.೧೬ರಂದು 'ಬಕುಲ ಪುಷ್ಪ' ಅಭಿನಂದನಾ ಗ್ರಂಥ ಬಿಡುಗಡೆ



**ಉದಯರಶ್ಮಿ ನ್ಯೂಸ್**

ವಿಜಯಪುರ: ಎನ್.ಆರ್. ಕುಲಕರ್ಣಿ ಅವರ "ಬಕುಲ ಪುಷ್ಪ" ಅಭಿನಂದನಾ ಗ್ರಂಥ ಬಿಡುಗಡೆ ಹಾಗೂ ಗ್ರಂಥ ತುಲಾಭಾರ ಸಮಾರಂಭವನ್ನು ನಗರದ ಕಂದಗಲ್ಲ ಶ್ರೀ ಹನುಮಂತರಾಯ ರಂಗಮಂದಿರ, ಸ್ಟೇಷನ್ ರಸ್ತೆ, ವಿಜಯಪುರದಲ್ಲಿ 16–06–2024 ರಂದು ರವಿವಾರ ಬೆಳಿಗ್ಗೆ 10.00 ಗಂಟೆಗೆ ಜರುಗಲಿದೆ.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀಕಂಠ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಗುರು ಬಮ್ಮಲಿಂಗೇಶ್ವರ ಬೃಹನ್ಮಠ, ನಾಗಣಸೂರ ವಹಿಸುವರು. ಮಾಜಿ ಸಚಿವರಾದ ಅಪ್ಪಾಸಾಹೇಬ ಎಮ್. ಪಟ್ಟಣಶೆಟ್ಟಿ ಉದ್ಘಾಟನೆ ಮಾಡುವರು. ಅಧ್ಯಕ್ಷತೆಯನ್ನು ಹಿರಿಯ ಸಂಶೋಧಕ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ವಹಿಸುವರು. ವಿಶ್ರಾಂತ ಇಂಗ್ಲೀಷ ಪ್ರಾಧ್ಯಾಪಕರಾದ ಡಾ.ಆರ್.ಕೆ. ಕುಲಕರ್ಣಿ ಇವರು ಗ್ರಂಥ ಬಿಡುಗಡೆ ಮಾಡುವರು. ವಿಶ್ರಾಂತ ಪ್ರಾಚಾರ್ಯರಾದ ಜಿ.ಆರ್. ಕುಲಕರ್ಣಿ ಗ್ರಂಥಾವಲೋಕನ ನೆರವೇರಿಸುವರು ಎಂದು ಎನ್.ಆರ್. ಕುಲಕರ್ಣಿ ಅವರ ಅಭಿನಂದನ ಸಮಿತಿ ಹಾಗೂ ಅಭಿನಂದನ ಗ್ರಂಥ ಸಂಪಾದಕ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಜ್ಜ ಮತ್ತು ಎರಡು ಬಿಂದಿಗೆಗಳು

ಉದಯರಶ್ಮಿ ದಿನಪತ್ರಿಕೆ

ಒಂದೂರಿನಲ್ಲಿ ಒಬ್ಬಳು ಅಜ್ಜಿ ಕಾಡಿನಂಚಿನಲ್ಲಿ ವಾಸವಾಗಿದ್ದಳು. ಮನೆಯ ದಿನನಿತ್ಯದ ಬಳಕೆಗಾಗಿ ಅಗತ್ಯವಿರುವ ನೀರನ್ನು ತರಲು ಅಜ್ಜಿಯು ನಾಲ್ಕೈದು ಕಿ.ಮೀ ದೂರದಲ್ಲಿದ್ದ ನದಿಯಿಂದ ಕಾಡಿನ ಹಾದಿಯಲ್ಲಿ ಸಾಗಿ ತರಬೇಕಿತ್ತು. ನದಿಯಿಂದ ನೀರನ್ನು ತರಲು ಅಜ್ಜಿಯು ಎರಡು ತಾಮ್ರದ ಬಿಂದಿಗೆಗಳನ್ನು ಬಳಸುತ್ತಿದ್ದಳು. ಈ ಎರಡು ತಾಮ್ರದ ಬಿಂದಿಗಳು ಆತ್ಮೀಯ ಮಿತ್ರರಾಗಿದ್ದು, ನಿತ್ಯವೂ ತಮ್ಮ ಉಭಯ ಕುಶಲೋಪ–ರಿಗಳನ್ನು ಹಂಚಿಕೊಳ್ಳುತ್ತಿದ್ದವು. ಹೀಗಿರುವಾಗ ಒಂದು ಬಾರಿ ಈ ತಾಮ್ರದ ಬಿಂದಿಗೆಗಳ ಪೈಕಿ ಒಂದು ಬಿಂದಿಗೆ ತೂತಾಗಿಬಿಡುತ್ತದೆ ಮತ್ತು ಬಿಂದಿಗೆಯು ತೂತಾಗಿರುವ ವಿಚಾರ ಅಜ್ಜಿಗೆ ತಿಳಿಯುವುದೇ ಇಲ್ಲ.

ಹೀಗೆ ದಿನನಿತ್ಯ ಅಜ್ಜಿ ಎರಡೂ ಬಿಂದಿಗೆಗಳಲ್ಲಿ ನೀರನ್ನು ತುಂಬಿಕೊಂಡು ನದಿಯಿಂದ ಕಾಡಿನ ಹಾದಿಯ ಮೂಲಕ ತನ್ನ ಮನೆಗೆ ಬರುತ್ತಿದ್ದಳು. ತೂತಾಗದೆ ಇರುವ ಬಿಂದಿಗೆಯಲ್ಲಿ ನದಿಯಿಂದ ತುಂಬಿಕೊಂಡ ನೀರು ಪೂರ್ತಿಯಾಗಿ ಮನೆಗೆ ಬಂದರೆ, ತೂತಾಗಿದ್ದ ಬಿಂದಿಗೆಯಲ್ಲಿ ತುಂಬಿಕೊಂಡು ಬಂದ ನೀರು ಅರ್ಧಕ್ಕರ್ಧ ದಾರಿಯುದ್ದಕ್ಕೂ ಚೆಲ್ಲಿ ಮನೆಗೆ ಬರುವಾಗ ಕೇವಲ ಅರ್ಧ ಬಿಂದಿಗೆಯಷ್ಟು ಮಾತ್ರ ಉಳಿಯುತ್ತಿತ್ತು. ಇದನ್ನು ದಿನನಿತ್ಯ ಗಮನಿಸುತ್ತಿದ್ದ ತೂತಾಗದೆ ಇದ್ದ ಬಿಂದಿಗೆಯು ತೂತಾಗಿರುವ ಬಿಂದಿಗೆಯನ್ನು ನೋಡಿ ನನ್ನಲ್ಲಿ ತುಂಬಿಕೊಂಡು ಬರುವ ನೀರು ಪೂರ್ತಿಯಾಗಿ ಮನೆಗೆ ಬಂದು ಅಜ್ಜಿಗೆ ಬಹಳಷ್ಟು ನನ್ನಿಂದ ಉಪಕಾರವಾಗುತ್ತಿದೆ. ಆದರೆ ನೀನಾದರೋ ನೋಡು ತೂತಾಗಿದ್ದೀಯ, ತೂತಾಗಿರುವ ನಿನ್ನಲ್ಲಿ ನೀರನ್ನು ತುಂಬಿಕೊಂಡು ಅಜ್ಜಿಯು ಮನೆಗೆ ಬಂದರೆ ಅರ್ಧಕ್ಕರ್ಧ ನೀರು ಪೋಲಾಗುತ್ತಿದೆ. ಇದರಿಂದ ನೀನು ನಿರುಪಯುಕ್ತವಾಗಿದ್ದು, ನಾನು ಅಜ್ಜಿಗೆ ಹೆಚ್ಚು ಉಪಯೋಗವಾಗುತ್ತಿದ್ದೇನೆ ಎಂದು ಪ್ರತಿ ದಿನ ಹೀಯಾಳಿಸುತ್ತಿತ್ತು.

ತೂತಾಗಿರುವ ಬಿಂದಿಗೆಯು ತನಗೆ ಒದಗಿರುವ ದುಸ್ಥಿತಿಯನ್ನು ನೆನೆದು ಮರುಗುತ್ತ ಕಣ್ಣೀರು ಹಾಕುತ್ತಿತ್ತು. ನೀರು ತುಂಬಿಕೊಂಡು ಕಾಡಿನ ದಾ–ರಿಯಲ್ಲಿ ಬರುತ್ತಿದ್ದಾಗ ದಾರಿ ಮಧ್ಯೆ ಸರಿಯಿದ್ದ ಬಿಂದಿಗೆಯು ತೂತಾದ ಬಿಂದಿಗೆಯನ್ನು ಹೀಯಾಳಿಸುತ್ತಲೇ ಇತ್ತು. ತೂತಾದ ಬಿಂದಿಗೆಯ ಕಣ್ಣೀರನ್ನು ನೋಡಿ ಇನ್ನೊಂದು ಬಿಂದಿಗೆಯು ಒಳಗೊಳಗೇ ನಗುತ್ತಿತ್ತು. ಇದನ್ನು ಗಮನಿಸಿದ ಅಜ್ಜಿಯು ಎರಡೂ ಬಿಂದಿಗೆಗಳ ಬಳಿ ನಿಮ್ಮ ಸಮಸ್ಯೆ ಏನೆಂದು ಕೇಳುತ್ತಾಳೆ. ಆಗ ತೂತಾದ ಬಿಂದಿಗೆಯು ತನ್ನ ಸಮಸ್ಯೆ ಹಾಗೂ ತಾನು ಯಾವುದಕ್ಕೂ ಉಪಯೋಗವಿಲ್ಲದೇ ನಿರುಪಯುಕ್ತ ಬಿಂದಿಗೆಯಾಗಿದ್ದೇನೆ ಎಂದು ತನ್ನ ಅಳಲನ್ನು ಅಜ್ಜಿಯಲ್ಲಿ ತೋಡಿಕೊಂಡಿತು.

ಆಗ ಅಜ್ಜಿಯು ನಗುತ್ತಾ ಎರಡೂ ಮಡಿಕೆಗಳನ್ನು ಅಕ್ಕಪಕ್ಕದಲ್ಲಿ ಕುಳ್ಳಿರಿಸಿಕೊಂಡು, ನೋಡಿ ಮಡಿಕೆಗಳಾ ನಿಮ್ಮಿಬ್ಬರಲ್ಲಿ ಯಾರೂ ಇಲ್ಲಿ ಕೀಳು ಅಲ್ಲ. ಏಕೆಂದರೆ ನಾನು ಪ್ರತಿನಿತ್ಯ ತೂತಾಗದೆ ಇರುವ ಬಿಂದಿಗೆಯನ್ನು ನನ್ನ ಬಲಗೈಯಲ್ಲಿ ಹಾಗೂ ತೂತಾದ ಬಿಂದಿಗೆಯನ್ನು ಎಡಗೈಯಲ್ಲಿ ಹಿಡಿದುಕೊಂಡು ನಿತ್ಯ ನೀರನ್ನು ತುಂಬಿಕೊಂಡು ಮನೆಗೆ ಹೋಗುತ್ತೇನೆ. ತೂತಾಗದೆ ಇರುವ ಬಿಂದಿಗೆಯಲ್ಲಿ ನೀರನ್ನು ತುಂಬಿಕೊಂಡು ಕಾಡಿನ ಹಾದಿಯಲ್ಲಿ ಮನೆಯೆಡೆಗೆ ಹೋಗುವಾಗ ಒಂದು ತೊಟ್ಟು ನೀರೂ ಹೊರ ಚೆಲ್ಲದೆ ಹಾಗೆಯೇ ನನ್ನ ಮನೆಗೆ ಸೇರುತ್ತಿತ್ತು. ಆದರೆ ತೂತಾದ ಬಿಂದಿಗೆಯನ್ನು ನನ್ನ ಎಡಗೈಯಲ್ಲಿ ಹಿಡಿದುಕೊಂಡು ನೀರನ್ನು ತುಂಬಿಕೊಂಡು ಮನೆಯೆಡೆಗೆ ಸಾಗುತ್ತೇನೆ. ಆಗ ಅದರಲ್ಲಿದ್ದ ನೀರು ದಾ–ರಿಯುದ್ದಕ್ಕೂ ಚೆಲ್ಲುತ್ತಾ ಕೇವಲ ಅರ್ಧ ಬಿಂದಿಗೆಯಷ್ಟೇ ನೀರು ನನ್ನ ಮನೆಗೆ ಸೇರುತ್ತಿತ್ತು.

ಮಡಿಕೆಗಳಾ ಈಗ ನೋಡಿ ಬಲಗೈಯಲ್ಲಿ ತುತಾಗದೇ ಇರುವ ಬಿಂದಿಗೆಯಿಂದ ಒಂದು ಹನಿಯೂ ನೀರು ಹೊರಚೆಲ್ಲದೇ ಇದ್ದ ಕಾರಣ ನಾನು ಸಾಗುತ್ತಿದ್ದ ಹಾದಿಯುದ್ದಕ್ಕೂ ಬಲಭಾಗದಲ್ಲಿ ಒಂದೇ ಒಂದು ಗಿಡಗಳು ಬೆಳೆಯದೇ ಬರೇ ಗುಡ್ಡವಾಗಿ ಉಳಿದು ಬಿಟ್ಟಿದೆ. ಆದ–ರೆ ಎಡಗೈಯಲ್ಲಿ ತೂತಾದ ಬಿಂದಿಗೆಯಲ್ಲಿ ನೀರನ್ನು ತುಂಬಿಕೊಂಡು ಸಾಗುತ್ತಿದ್ದ ಕಾರಣದಿಂದ ಅದರ ತೂತಿನ ಮೂಲಕ ಹೊರಚೆಲ್ಲಿದ ನೀರಿನಿಂದಾಗಿ ಎಡಭಾಗದಲ್ಲಿ ದಾರಿಯುದ್ದಕ್ಕೂ ಹಸಿರು ಹಸಿರಾದ ಗಿಡ ಮರಗಳು ಹೇರಳವಾಗಿ ಬೆಳೆದಿವೆ. ನನ್ನ ಮನೆಗೆ ಮಡಿಕೆಯಲ್ಲಿ ನೀರನ್ನು ತೆಗೆದುಕೊಂಡು ಹೋಗುವಾಗ ಪೂರ್ತಿ ಬಿಂದಿಗೆ ನೀರು ದೊರೆಯದಿದ್ದರೂ ದಾ–ರಿಯುದ್ದಕ್ಕೂ ಅದರಿಂದ ಚೆಲ್ಲಿದ ನೀರಿನ ಕಾರಣದಿಂದಾಗಿ ಗಿಡಮರಗಳು ಹಚ್ಚ ಹಸುರಾಗಿ ಮತ್ತು ಸೊಂಪಾಗಿ ಬೆಳೆದಿವೆ. ಆದ್ದರಿಂದ ಇಲ್ಲಿ ತೂತಾದ ಬಿಂದಿಗೆಯನ್ನು ಕೀಳೆಂದು ಕರೆಯಲು ಸಾಧ್ಯವಿಲ್ಲ. ಮತ್ತು ನಿಮ್ಮಿಬ್ಬರಲ್ಲಿ ಯಾರೂ ಶ್ರೇಷ್ಠರು ಅಥವಾ ಯಾರೂ ಕೀಳೆಂದು ಹೇಳಲು ಸಾಧ್ಯವಿಲ್ಲ.

ಯಾವುದಕ್ಕೂ ಉಪಯೋಗವಿಲ್ಲವೆಂದು ನಾವು ದೂರವಿಡುವ ವಸ್ತುಗಳು ಅಥವಾ ವ್ಯಕ್ತಿಗಳು ಒಂದಲ್ಲ ಒಂದು ರೀತಿಯಲ್ಲಿ ನಮಗೆ ಅಥವಾ ಸಮಾಜಕ್ಕೆ ಹಲವು ಸಂದರ್ಭಗಳಲ್ಲಿ ಉಪಕಾ–ರಿಗಳೇ ಆಗಿರುತ್ತಾರೆ. ಆದ್ದರಿಂದ ಇಲ್ಲಿ ಮೇಲು ಕೀಳೆಂಬುದು ಖಂಡಿತ ಒಳ್ಳೆಯದಲ್ಲ ಎಂದು ಅಜ್ಜಿಯು ಎರಡೂ ಬಿಂದಿಗೆಗಳಿಗೆ ಕಿವಿಮಾತನ್ನು ಹೇಳುತ್ತಾಳೆ. ಇದರಿಂದ ಜ್ಞಾನೋದಯವಾದ ಎರಡೂ ಬಿಂದಿಗೆಗಳು ಹಿಂದಿನಂತೆಯೇ ಉತ್ತಮ ಗೆಳೆಯರಾಗಿ ಸಹ ಜೀವನವನ್ನು ನಡೆಸಲು ಪ್ರಾರಂಭಿಸಿದವು.

ನೀತಿ: ಸಮಾಜದಲ್ಲಿ ಯಾರೂ ಕೀಳಲ್ಲ, ಯಾರೂ ಮೇಲಲ್ಲ; ಸಮಯ ಸಂದರ್ಭದಲ್ಲಿ ನಿರುಪಯೋಗಿಗಳಾಗಿದ್ದರೂ ಒಂದಲ್ಲ ಒಂದು ರೀತಿಯಲ್ಲಿ ಸಮಾಜಕ್ಕೆ ಪ್ರತಿಯೊಬ್ಬರೂ ಅತ್ಯಂತ ಅವಶ್ಯಕ.







– ಸಂತೋಷ್ ರಾವ್ ಪೆರ್ಮುಡ,
ಪೆರ್ಮುಡ ಮನೆ, ಪಟ್ರಮೆ ಗ್ರಾಮ
ಮತ್ತು ಅಂಚೆ ಬೆಳ್ತಂಗಡಿ ತಾಲೂಕು,

# ಸರ್ಕಾರದಿಂದ ದಲಿತ ಜನಾಂಗಕ್ಕೆ ಅನ್ಯಾಯ :ಚಲವಾದಿ

ಉದಯರಶ್ಮಿ ನ್ಯೂಸ್

ವಿಜಯಪುರ: ನಗರದ ಮನಗೂಳಿ ಅಗಸಿ ಬಡಾವಣೆಯ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಡಾ ಬಿ ಆರ್ ಅಂಬೇಡ್ಕರ್ ಯುವಕ ಸಂಘದಿಂದ ಹಮ್ಮಿಕೊಂಡಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಶುಕ್ರವಾರ 25ನೇ ದಿನ ಹಾಗೂ 3ನೇ ದಿನ ಸರದಿ ಉಪವಾಸ ಸತ್ಯಾಗ್ರಹ ಪೂರೈಸಿದೆ. ಇಂದು ಹೋರಾಟಗಾರರಾದ ರೋಹಿತ ಮಲಕಣ್ಣನವರ ಹಾಗೂ ಮಂಜುನಾಥ ಶಿವಶರಣ ಅವರು ಸರದಿ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ.




ಈ ಸಂದರ್ಭದಲ್ಲಿ ಮುಖಂಡ ಮಹೇಶ ಚಲವಾದಿ ಮಾತನಾಡಿ, ಕಳೆದ 25 ದಿನಗಳಿಂದ ಅಹೋರಾತ್ರಿ ಧರಣಿ ಸತ್ಯಾಗ್ರಹ ಹಾಗೂ ಕಳೆದ 3 ದಿನಗಳಿಂದ ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರೂ ಕೂಡಾ, ರಾಜ್ಯ ಸರ್ಕಾರ ದಿವ್ಯ ನಿರ್ಲಕ್ಷ್ಯ ತೋರುವ ಮೂಲಕ ದಲಿತ ಜನಾಂಗಕ್ಕೆ ಘೋರ ಅನ್ಯಾಯವೆಸಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಇಲ್ಲಿಯವರೆಗೆ ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ರಾಜ್ಯ ಸರ್ಕಾರದ ಯಾವೊಬ್ಬ ಪ್ರತಿನಿಧಿಯು ಕೂಡ ನಮ್ಮ ಸಮಸ್ಯೆಯನ್ನು ಆಲಿಸಲು ಬಾರದೆ ಇರುವುದು ಇವರ ದಲಿತ ವಿರೋಧಿ ನೀತಿಯನ್ನು ಎತ್ತಿ ತೋರಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ರಾಜು ಕಾಖಂಡಕಿ, ಶಿವರಾಜ ಸಾಣಕರ, ಬಸವಕುಮಾರ ಕಾಂಬಳೆ, ಸತೀಶ ಕುಬಕಡ್ಡಿ, ರವಿ ಕಾಖಂಡಕಿ, ಶಂಕರ ಚಲವಾದಿ, ಪ್ರತಾಪ ಚಿಕ್ಕಲಕಿ, ಕೀರ್ತಿ ಕಾಖಂಡಕಿ, ಬಸವರಾಜ ಕುಬಕಡ್ಡಿ, ಶಂಕರ ಕಾಖಂಡಕಿ, ಸಚೀನ ಕಾಖಂಡಕಿ, ಆಕಾಶ ಕಾಂಬಳೆ, ಆಕಾಶ ಕಾಖಂಡಕಿ, ಶೇಖು ಕೂಡಗಿ, ಕೃಷ್ಣಾ ಚಲವಾದಿ, ಸುಧಾ ಚಲವಾದಿ, ರಾಧಿಕಾ ಕುಬಕಡ್ಡಿ, ಆಶಾ ಮಾನೆ, ಗೀತಾ ವಾಲೀಕಾರ, ಪವಿತ್ರಾ ಚಲವಾದಿ, ರುಕ್ಮಿಣಿ ಕಾಖಂಡಕಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ರೇಣುಕಾಸ್ವಾಮಿ ಕೊಲೆ ಪ್ರಕರಣ; ನಟ ದರ್ಶನ್ ಪರವಾಗಿ ಸರ್ಕಾರದ ಮೇಲೆ ಒತ್ತಡ; ಆರೋಪ ತಳ್ಳಿಹಾಕಿದ ಡಿಕೆ ಶಿವಕುಮಾರ್



ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ನಟ ದರ್ಶನ್ ತೂಗುದೀಪ ಅವರ ಪರವಾಗಿ ರಾಜ್ಯ ಸರ್ಕಾರವು ಪ್ರಭಾವಿಗಳ ಒತ್ತಡಕ್ಕೆ ಒಳಗಾಗಿದೆ ಎಂಬ ವರದಿಗಳನ್ನು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಶುಕ್ರವಾರ ತಳ್ಳಿಹಾಕಿದ್ದಾರೆ.

ಪೋಕ್ಸೊ ಪ್ರಕರಣದಲ್ಲಿ ಬಿಜೆಪಿ ನಾಯಕ ಮತ್ತು ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ವಿರುದ್ಧ ಬಂಧನ ವಾರಂಟ್ ಜಾರಿಯಾದ ನಂತರ, ಕಾಂಗ್ರೆಸ್ ಸರ್ಕಾರ ಬಿಎಸ್‌ವೈ ವಿರುದ್ಧ ದ್ವೇಷ ರಾಜಕಾರಣ ನಡೆಸುತ್ತಿದೆ ಎಂಬ ಬಿಜೆಪಿ ನಾಯಕರ ಆರೋಪಗಳನ್ನು ಅವರು ತಳ್ಳಿಹಾಕಿದರು.

ದರ್ಶನ್ ಪ್ರಕರಣದಲ್ಲಿ ಕೆಲವು ಪ್ರಭಾವಿ ವ್ಯಕ್ತಿಗಳು ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಯಾರ ಒತ್ತಡವೂ ಇಲ್ಲ, ನಮ್ಮ ಗೃಹ ಸಚಿವರಾಗಲಿ ಅಥ–ವಾ ಬೇರೆಯವರಾಗಲಿ ಇದರಲ್ಲಿ (ತನಿಖೆ) ಭಾಗಿಯಾಗಿಲ್ಲ. ನಾವು ಯಾವುದನ್ನೂ ಶಿಫಾರಸು ಮಾಡುತ್ತಿಲ್ಲ, ನಮಗೆ ಏನೂ ತಿಳಿದಿಲ್ಲ ಎಂದು ಹೇಳಿದರು.

ನಟ ದರ್ಶನ್ ಅವರಿಗೆ ಪೊಲೀಸ್ ಠಾಣೆಯಲ್ಲಿ 'ರಾಯಲ್ ಟ್ರೀಟ್‌ಮೆಂಟ್' ನೀಡಲಾಗುತ್ತಿದೆ ಮತ್ತು 'ಗೌಪ್ಯತೆ' ಕಾಪಾಡಲು ಅಲ್ಲಿ ಶಾಮಿಯಾನವನ್ನು ಹಾಕಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ, 'ನಾನು ಪೊಲೀಸರಲ್ಲಿ ವಿಚಾರಿಸಿದ್ದೇನೆ. ಅಲ್ಲಿ (ಪೊಲೀಸ್ ಠಾಣೆಯಲ್ಲಿ) 13 ಆರೋಪಿಗಳಿದ್ದಾರೆ. ನೀವು (ಮಾಧ್ಯಮ) ಬೆಳಿಗ್ಗೆಯಿಂದ ಸಂಜೆಯವರೆಗೆ ನಿಮ್ಮ ಕ್ಯಾಮೆರಾಗಳೊಂದಿಗೆ ಅಲ್ಲಿ ನಿಂತಿದ್ದೀರಿ. ಮುಕ್ತವಾಗಿ ಕೆಲಸ ಮಾಡಲು ಪೊಲೀಸರಿಗೆ ಅವಕಾಶ ಬೇಕು. ಆದ್ದರಿಂದಲೇ ಅವರು ಅಲ್ಲಿ ಶಾಮಿಯಾನ ಹಾಕಿದ್ದಾರೆ ಎಂದರು.

ನಟನ ಅಭಿಮಾನಿಯಾಗಿದ್ದ ಚಿತ್ರದುರ್ಗದ ನಿವಾಸಿ 33 ವರ್ಷದ ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಲೆಂಜಿಂಗ್ ಸ್ಟಾರ್ ಎಂದೇ ಖ್ಯಾತರಾಗಿರುವ ದರ್ಶನ್ ಮತ್ತು ಅವರ ಸಹಚರರನ್ನು ಮಂಗಳವಾರ ಬಂಧಿಸಲಾಗಿದೆ. ದರ್ಶನ್ ಗೆಳತಿ ಪವಿತ್ರಾ ಗೌಡ ಅವರಿಗೆ ಮಾಡಿರುವ ಸಂದೇಶದಲ್ಲಿ ರೇಣುಕಾಸ್ವಾಮಿ ಅವರು ಅಸಭ್ಯ ಭಾಷೆ ಬಳಸಿದ್ದಾರೆ ಮತ್ತು ಆಕ್ಷೇಪಾರ್ಹ ಸಂದೇಶಗಳನ್ನು ಪೋಸ್ಟ್ ಮಾಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಯಡಿಯೂರಪ್ಪ ವಿರುದ್ಧದ ಪ್ರಕರಣ ಮತ್ತು ಬಂಧನ ವಾರೆಂಟ್‌ಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ದ್ವೇಷ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿರುವ ಬಿಜೆಪಿ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಕೇಸರಿ ಪಕ್ಷದ ಪ್ರಕರಣದ ಬಗ್ಗೆ ಪ್ರಶ್ನಿಸಿದರು.

ನಾನು ಅದರ (ಪ್ರಕರಣ) ಬಗ್ಗೆ ಆಳವಾಗಿ ಮಾತನಾಡುವುದಿಲ್ಲ. ಕಾಂಗ್ರೆಸ್ ಪಕ್ಷವು ಯಾರನ್ನೂ ದ್ವೇಷಿಸುವುದಿಲ್ಲ, ನಾನು ದ್ವೇಷದ ರಾಜಕಾರಣದ ಬಗ್ಗೆ ಮಾತನಾಡಿದರೆ ಅದು ಬೇರೆಡೆ ಹೋಗುತ್ತದೆ. ಆದ್ದ–ರಿಂದ ನಾನು ಮಾತನಾಡಲು ಬಯಸುವುದಿಲ್ಲ. ನನಗೆ ಅನುಕಂಪವಿದೆ (ಯಡಿಯೂರಪ್ಪ ಬಗ್ಗೆ) , ಏಕೆಂದರೆ ನನಗೂ ಅದರ ನೋವು ತಿಳಿದಿದೆ ಎಂದು ಅವರು ಹೇಳಿದರು.

'ಬಿಜೆಪಿ ರಾಹುಲ್ ಗಾಂಧಿ ವಿರುದ್ಧ ದಾಖಲಿಸಿರುವ ಕೇಸು ಯಾವ ರೀತಿಯ ರಾಜಕೀಯ. ಬಿಜೆಪಿಯವರು ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ. ರಾಹುಲ್ ಗಾಂಧಿ ಜಾಹೀರಾತು ಕೊಟ್ಟಿದ್ದಾರಾ? ರಾಹುಲ್ ಗಾಂಧಿ ಎಐಸಿಸಿ ಅಥವಾ ಕೆಪಿಸಿಸಿ ಅಧ್ಯಕ್ಷರೇ? ಅವರು ಯಾವುದೇ ಜಾಹೀರಾತು ನೀಡಿಲ್ಲ. ಪತ್ರಿಕೆಗಳಲ್ಲಿ ಪ್ರಕಟವಾದ ಯತ್ನಾಳ್ (ಬಿಜೆಪಿ ಶಾಸಕ) ಹೇಳಿಕೆಯನ್ನು ಆಧರಿಸಿ ನಮ್ಮ ಕೆಪಿಸಿಸಿ ಇದನ್ನು ನೀಡಿದೆ. ಬಿಜೆಪಿಯವರು ನಮ್ಮ ಮೇಲೆ ಕೇಸು ಹಾಕಿಲ್ಲವೇ? ನಾವು ನ್ಯಾಯಾಲಯಕ್ಕೆ ಹೋಗಲಿಲ್ಲವೇ? ಅದನ್ನು ಏನೆಂದು ಕರೆಯುತ್ತಾರೆ? ವಿಜಯೇಂದ್ರ (ರಾಜ್ಯ ಬಿಜೆಪಿ ಮುಖ್ಯಸ್ಥ) ಅವರಿಗೆ ಪ್ರಕರಣ ದಾಖಲಿಸುವ ಕಾಮನ್ ಸೆನ್ಸ್ ಇರಲಿಲ್ಲವೇ? ಎಂದು ಪ್ರಶ್ನಿಸಿದರು.

# ಇದೇನು ಸಂಸ್ಕೃತಿ? ಇದೇನು ಸಭ್ಯತೆ?

ಉದಯರಶ್ಮಿ ದಿನಪತ್ರಿಕೆ

ದೇವರನ್ನು ಮತ್ತು ಬೆರಳೆಣಿಕೆಯ ಒಬ್ಬಿಬ್ಬರನ್ನು ಹೊರತುಪಡಿಸಿ ವ್ಯಕ್ತಿ ಪೂಜೆ ಮಾಡಲೇಬಾರದು ಎಂಬ ಭಾವ ನನ್ನದು. ತಂದೆ ತಾಯಿಯನ್ನು ಪ್ರೀತಿಸಬೇಕು, ಅವರಲ್ಲೂ ಕೂಡ ಮನುಷ್ಯ ಸಹಜವಾದ ರಾಗ ದ್ವೇಷಗಳಿರುವುದರಿಂದ ಅವರ ವ್ಯಕ್ತಿತ್ವದ ಎಲ್ಲ ಒಳಿತು ಕೆಡುಕುಗಳೊಂದಿಗೆ ಅವರನ್ನು ಗೌರವಿಸಬೇಕು.

ವೀಣಾಂತರಂಗ



–ವೀಣಾ ಎಚ್. ಪಾಟೀಲ್, ಮುಂಡರಗಿ

* ನಾಡು ಅತ್ಯಂತ ಗೌರವಿಸುವ ಸ್ವಾಮೀಜಿಯೊಬ್ಬರು

ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ಹಗರಣದ ಆರೋಪದಿಂದಾಗಿ ತಮ್ಮ ಸಾಮಾಜಿಕ ಗೌರವ, ಸ್ಥಾನಮಾನಗಳನ್ನು ಕಳೆದುಕೊಂಡು ಜೈಲಿನ ಕಂಬಿಗಳ ಹಿಂದೆ ನಿಂತಿ–ದ್ದಾರೆ.

* ಮತ್ತೊಂದು ಮಠದ ಸ್ವಾಮಿಗಳು ಕೂಡ ಇಂತಹದೇ ಹಗರಣದಲ್ಲಿ ಕೆಲ ವರ್ಷಗಳ ಹಿಂದೆ ಭಾಗಿಯಾಗಿದ್ದರು.. ಅವರ ಮೇಲೂ ಆರೋಪ ಪ್ರತ್ಯಾರೋಪಗಳ ಸು–ರಿಮಳೆ ಸುರಿದಿತ್ತು.

* ಕೆಲ ವರ್ಷಗಳ ಹಿಂದೆ ನಟಿಯೊಬ್ಬಳು ಯಶಸ್ವಿ ನಾಯಕ ನಟನೊಬ್ಬನಿಂದ ತನಗಾದ ಮುಜುಗರವನ್ನು ಹೇಳಿಕೊಂಡಾಗ, ತಪ್ಪು ಒಪ್ಪುಗಳ ಪರಾಮರ್ಶೆ ಮಾಡಲು ಸಾಧ್ಯವಾಗದಿದ್ದರೂ ಆಕೆಯ ವಿರುದ್ಧ ಎಲ್ಲರೂ ತಿರುಗಿ ಬಿದ್ದರು. ಮುಂದೆ ಆಕೆ ಹಲವಾರು ಅವಕಾಶಗಳನ್ನು ಕಳೆದುಕೊಂಡಳು.

* ರಾಷ್ಟ್ರೀಯ ಪಕ್ಷವೊಂದರ ಮುಖ್ಯ ಭಾಗವಾಗಿದ್ದು, ಇಡೀ ಕುಟುಂಬವೇ ರಾಜಕಾರಣದಲ್ಲಿದ್ದು ಸ್ವಯಂ ತಾನೂ ಕೂಡ ಸಂಸದನಾಗಿದ್ದ ವ್ಯಕ್ತಿಯೊಬ್ಬ ತನ್ನ ಅಧಿಕಾರ ಮದದಿಂದ ಸಾಕಷ್ಟು ಜನ ಹೆಣ್ಣು ಮಕ್ಕಳ ಬಾಳು ಹಾಳಾಗಲು ಕಾರಣವಾಗಿ ದೇಶ ತೊರೆದು ಹೋಗಿ ಇದೀಗ ಮರಳಿ ಬಂದ ನಂತರ ವಿಚಾರಣೆಯನ್ನು ಎದುರಿಸುತ್ತಿದ್ದಾನೆ .

* ಮತ್ತೋರ್ವ ನಟಿ ವಿರೋಧಿಸಬೇಕೆಂಬ ಒಂದೇ ಕಾರಣಕ್ಕಾಗಿ ಸರ್ಕಾರ ಕೂಡ ಮಾಡಿರುವ ಉಚಿತ ಬಸ್ ಪ್ರಯಾಣ ಮಾಡುವ ಹೆಣ್ಣು ಮಕ್ಕಳನ್ನು ಕುರಿತು ಅಸಭ್ಯವಾಗಿ ಮಾತನಾಡಿದ್ದಾಳೆ. ಇಂತಹ ಮಾತುಗಳನ್ನು ಆಡಿದ ಮಾಜಿ ಮುಖ್ಯಮಂತ್ರಿಗಳೊಬ್ಬರು ಕೂಡ ಜನರ ಆಕ್ರೋಶಕ್ಕೆ ಗು–ರಿಯಾಗಿ ಕ್ಷಮಾಪಣೆ ಕೇಳಿದರು.

* ಕಳೆದ ವಾರ ಜವಾಬ್ದಾ–ರಿಯುತ ಪ್ರಜೆಗಳ ಪ್ರತಿನಿಧಿ ಯಾಗಿ ಆಯ್ಕೆಯಾದ ಚಿತ್ರನಟಿಯೊಬ್ಬಳು ಹರತಾಳಕ್ಕೆ ಬರುವ ಹೆಣ್ಣು ಮಕ್ಕಳ ಅನಿವಾರ್ಯತೆಯನ್ನು, ಬದುಕಿನ ದಾರಿಯನ್ನು ಹಂಗಿಸಿ ಮಾತನಾಡಿದ್ದಾಳೆ. ಕೋಟಿ ಕೋಟಿಗಳಲ್ಲಿ ಹಣ ದುಡಿಯುವ ಆಕೆಗೆ ತುತ್ತು ಅನ್ನಕ್ಕಾಗಿ ಪರದಾಡುವ, ತನ್ನಿಡೀ ಸಂಸಾರವನ್ನು ಸಾಗಿಸಲು ಒದ್ದಾಡುವ ಭಾರತದ ಕೋಟ್ಯಾಂತರ ಹೆಣ್ಣು ಮಕ್ಕಳ ಬದುಕಿನ ಬವಣೆಯ ಅರಿವಾದರೂ ಹೇಗೆ ಆದೀತು??

* ಇದೀಗ ಬಂದಿರುವ ಸುದ್ದಿ ಸಾಲು ಸಾಲು ಹಿಟ್ ಚಿತ್ರಗಳನ್ನು ಕೊಟ್ಟ ಓರ್ವ ಯಶಸ್ವಿ ನಾಯಕ ನಟ ತನ್ನ ಸ್ನೇಹಿತೆಗೆ ಕೆಟ್ಟದಾಗಿ ಮೆಸೇಜ್ ಮಾಡಿದ ಒಂದೇ ಕಾರಣಕ್ಕೆ ಒಬ್ಬ ವ್ಯಕ್ತಿಗೆ ಬುದ್ಧಿ ಕಲಿಸಲು ಹೋಗಿ ಆತನ ಜೀವವನ್ನೇ ತೆಗೆಯಲು ಕಾರಣನಾಗಿದ್ದಾನೆ.



ಇದನ್ನೆಲ್ಲ ನೋಡುತ್ತಿದ್ದರೆ ನಮ್ಮ ಸಾಂಸ್ಕೃತಿಕ ಅಧಪತನದ ಹಾದಿಗಳು ನಿಚ್ಚಳವಾಗಿ ತೋರುತ್ತವೆ.

ನಮ್ಮಲ್ಲಿರುವ ಮಾನವೀಯ ಮೌಲ್ಯಗಳು ಕುಸಿಯುತ್ತಿರುವ ಸಂಕೇತ ನಮಗೆ ಸ್ಪಷ್ಟವಾಗಿ ಕಾಣಸಿಗುತ್ತದೆ.



ಇವರಾರು ನಮಗೆ ಆದ–ರ್ಶಪ್ರಾಯರಲ್ಲ, ಇವರಾರು ನಮ್ಮ ನಾಯಕರಲ್ಲ, ಇವರಾರಿಗೂ ನಾವು ಅಭಿಮಾನಿಗಳಾಗಬೇಕಾಗಿಲ್ಲ.

ಸಾಮಾಜಿಕ ಜಾಲತಾಣಗಳಲ್ಲಿ ಚರ್ವಿತ ಚರ್ವಣವಾಗಿ ವರದಿಯಾಗುವ ಚಲನಚಿತ್ರ ತಾರೆಯರ, ಸೆಲೆಬ್ರಿಟಿಗಳ ಬದುಕಿನ ರೀತಿ ನೀತಿಗಳನ್ನು ನಮಗೆ ತೋಚಿದಂತೆ ಅರ್ಥೈಸಿಕೊಳ್ಳುವ ಜನರು ಅವರನ್ನು ಅಭಿಮಾನದಿಂದ ನೋಡುತ್ತಾರೆ , ಹುಚ್ಚು ಪ್ರೀತಿಯಿಂದ ಅವರ ಹೆಸರುಗಳನ್ನು ದೇಹದ ಅಂಗಗಳ ಮೇಲೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ, ಅವರ ಚಲನಚಿತ್ರಗಳು ಬಿಡುಗಡೆಯಾದಾಗ ನಾಲ್ಕಾಳೆತ್ತರದ ಕಟೌಟ್ಗಳನ್ನು ಹಾಕಿ ಹಾಲಿನ ಅಭಿಷೇಕ ಮಾಡಿ ತಮ್ಮ ಹುಚ್ಚು ಅಭಿಮಾನವನ್ನು ಮೆರೆಯುತ್ತಾರೆ!

ಯಾವುದೇ ವ್ಯಕ್ತಿ ಪರಿಪೂರ್ಣನಲ್ಲ... ಅಂತೆಯೇ ಯಾರೂ ಪೂಜನೀಯರಲ್ಲ. ನಿಜವಾಗಿ ಪೂಜಿಸಲ್ಪಡುವವರು ಕೂಡ ಒಂದೊಮ್ಮೆ ಮಾನವ ಸಹಜ ಗುಣಗಳಿಗೆ ತಮ್ಮನ್ನು ತಾವು ಒಡ್ಡಿಕೊಂಡು ಬದುಕಿನ ಬೆಂಕಿಯಲ್ಲಿ ಬಿದ್ದು ಶುದ್ಧ ಅಪರಂಜಿ ಚಿನ್ನವಾಗಿ ಹೊರಹೊಮ್ಮಿದವರು..

ನಾವು ಗೌರವಿಸಬೇಕಾಗಿರುವುದು ನಮ್ಮನ್ನು ಹೆತ್ತು ಹೊತ್ತು, ಸಾಕಿ ಸಲಹಿ, ಜೀವಿತದ ಕಷ್ಟಾರ್ಜಿತವನ್ನು ನಮ್ಮ ಮೇಲೆ ಸುರಿದು ವಿದ್ಯಾಭ್ಯಾಸ ಕೊಡಿಸಿ ನಾವು ಬದುಕಿನ ದಾ–ರಿಯಲ್ಲಿ ಮುನ್ನಡೆಯುವಾಗ ದೂರ ನಿಂತು ಕಣ್ತುಂಬಿಕೊಳ್ಳುವ ಪಾಲಕರನ್ನು, ಅವರ ಶ್ರಮ, ಪ್ರೀತಿ ಮತ್ತು ಮಮತೆಯನ್ನು..

ನಾವು ಗೌರವಿಸಬೇಕಾಗಿರುವುದು ಹಿಡಿ ಪಗಾರಕ್ಕಾಗಿ ತಮ್ಮೆಲ್ಲ ವಿದ್ಯೆಯನ್ನು ನಮಗೆ ಧಾರೆಯೆರೆದು, ನಮ್ಮೆಲ್ಲ ಅವಗುಣಗಳನ್ನು ಕಟೆದು ಕಗ್ಗಲ್ಲಿನಂತಿದ್ದ ನಮ್ಮನ್ನು ಸುಂದರ ಶಿಲ್ಪವನ್ನಾಗಿ ರೂಪಿಸಿದ ನಮ್ಮ ಗುರುಗಳನ್ನು ಮತ್ತು ಅವರ ಶಿಕ್ಷಣವನ್ನು..

ನಾವು ಗೌರವಿಸಬೇಕಾಗಿರುವುದು ನಮ್ಮೆಲ್ಲಾ ಕಷ್ಟ ಸುಖಗಳಲ್ಲಿ ನೋವು ನಲಿವಿನಲ್ಲಿ ಭಾಗಿಯಾಗುವ, ಬದುಕಿನಲ್ಲಿ ಏನೇ ಬಂದರೂ ನಮ್ಮ ಜೊತೆಗೆ ಹೆಗಲು ಕೊಡುವ, ಭರವಸೆ ತುಂಬುವ, ತಪ್ಪು ಮಾಡಿದರೆ ಕಾಲೆಳೆದು ತಿದ್ದುವ ನಮ್ಮ ಸ್ನೇಹಿತರನ್ನು ಮತ್ತು ಅವರ ಸ್ನೇಹವನ್ನು..

ನಾವು ಗೌರವಿಸಬೇಕಾಗಿರುವುದು ಜೀವಿತದ ಕೊನೆಯವರೆಗೂ ನಮ್ಮೊಂದಿಗೆ ಬಾಳುತ್ತೇನೆ ಎಂದು ದೇವರ ಸಾಕ್ಷಿಯಾಗಿ ಗುರು ಹಿರಿಯರ ಸಾಕ್ಷಿಯಾಗಿ ನಮ್ಮನ್ನು ವಿವಾಹವಾಗುವ ನಮ್ಮ ಸಂಗಾತಿಯನ್ನು, ನಮ್ಮೆಲ್ಲ ಸಿಟ್ಟು, ಸೆಡವು, ನೋವು,ನಿಷ್ಠುರಗಳನ್ನು ಸಹಿಸಿಕೊಂಡು ಬದುಕಿನಲ್ಲಿ ನಮ್ಮೊಂದಿಗೆ ಹೆಜ್ಜೆ ಹಾಕುವ ಸಂಗಾತಿಯನ್ನು, ಅವರ ಪ್ರೀತಿಯನ್ನು..

ನಾವು ಗೌರವಿಸಬೇಕಾಗಿರುವುದು ಬಿಸಿಲಾದರೇನು ಮಳೆಯಾದರೇನು ಉತ್ತಿ, ಬಿತ್ತಿ, ಬೆಳೆ ಬೆಳೆದು ನಮಗೆ ಅನ್ನ ಕೊಡುವ ರೈತನನ್ನು, ತಾನು ಅರೆ ಹೊಟ್ಟೆ ಉಂಡರೂ ಇಡೀ ಜಗತ್ತಿನ ಹೊಟ್ಟೆ ತುಂಬಿಸುವ ಅನ್ನದಾತನನ್ನು ಮತ್ತು ಆತನ ಶ್ರಮವನ್ನು..



ನಾವು ಗೌರವಿಸಬೇಕಾಗಿರುವುದು ತನ್ನ ತಂದೆ, ತಾಯಿ,ಹೆಂಡತಿ, ಮಕ್ಕಳನ್ನು, ಕುಟುಂಬವನ್ನು ಸಾವಿರಾರು ಕಿಲೋಮೀಟರ್ಗಳ ದೂರದಲ್ಲಿ ಇದ್ದು ಕಡುಬಿಸಿಲು ಚಳಿ ಮಳೆ ಎನ್ನದೆ ಬೆಚ್ಚದೆ ಬೆದರದೆ ನಮ್ಮ ದೇಶದ ಗಡಿ ರಕ್ಷಣೆಯನ್ನು ಮಾಡುವ, ದೇಶದ ಯಾವುದೇ ಮೂಲೆಯಲ್ಲಿಯೂ ತೊಂದರೆಯಾದರೆ ಕ್ಷಣಾರ್ಧದಲ್ಲಿ ಬಂದು ಕಾಪಾಡುವ ಮಿಲಿಟರಿ ಯೋಧರನ್ನು ನಾವು ಗೌರವಿಸಬೇಕಾಗಿರುವುದು ನಮ್ಮ ಮನೆ ಮಂದಿಯಲ್ಲವಾದರೂ ನಮ್ಮ ಆಗುಹೋಗುಗಳ ಮೇಲೆ ನಿಗಾ ಇಟ್ಟಿರುವ, ಸೂಕ್ತ ಸಮಯದಲ್ಲಿ ಸಹಾಯಕ್ಕೆ ಒದಗುವ ನಮ್ಮ ಸುತ್ತಲ ಸಮಾಜದ ಜೀವಿಗಳನ್ನು ಮತ್ತು ಅವರ ಸಹಾಯವನ್ನು, ಬೆಂಬಲವನ್ನು..

ನಿಜವಾಗಿ ಈ ಸಮಾಜಕ್ಕೆ ಉನ್ನತ ಕೊಡುಗೆಗಳನ್ನು ಕೊಟ್ಟ ದಾರ್ಶನಿಕರ, ವಿಜ್ಞಾನಿಗಳ, ಗುರುಗಳ, ಸಂತರ, ಸಾಮಾಜಿಕ ವ್ಯಕ್ತಿಗಳ ಅತಿ ದೊಡ್ಡ ಗುಂಪೇ ಇದೆ. ಆ ಎಲ್ಲರೂ ನಮ್ಮ ಬದುಕಿನ ಒಂದಲ್ಲ ಒಂದು ಗಳಿಗೆಯಲ್ಲಿ ನಮಗೆ ಸ್ಫೂರ್ತಿಯನ್ನು ತುಂಬಿದವರೇ.

ಅಂತಹವರು ನಮಗೆ ಮಾದ–ರಿಯಾಗಬೇಕು. ಅವರು ತೋರಿದ ಹಾದಿಯಲ್ಲಿ ನಾವು ಸಾಗಬೇಕು. ನಮ್ಮ ಆದರ್ಶ ಅವರುಗಳಾಗಬೇಕೇ, ಹೊರತು

ಬೇರೆಯವರಲ್ಲ.

ಯಶ ಮದ, ಅಧಿಕಾರ ಮದ, ಧನ ಮದ, ಜಾತಿ ಮದ, ಧರ್ಮಾಂಧತೆಯನ್ನು ಹಾಸು ಹೊದ್ದಿರುವ ಯಾರೂ ಕೂಡ ನಮಗೆ ಆದರ್ಶವಲ್ಲ ಎಂಬುದನ್ನು ಅರಿತು ಮುಖ್ಯವಾಗಿ “ನಮ್ಮ ಅರಿವೇ ನಮಗೆ ಗುರು” ಎಂಬುದನ್ನು ನೆನಪಿನಲ್ಲಿಟ್ಟುಕೊಂಡು, ಸಭ್ಯ ಸುಸಂಸ್ಕೃತ ಸಮಾಜದ ನೀತಿ ನಿಯಮಾವಳಿಗಳನ್ನು ಅನುಸರಿಸಿ ಭವ್ಯ ಭಾರತದ ಪ್ರಜೆಗಳಾಗಿ ನಮ್ಮ ಕರ್ತವ್ಯವನ್ನು ನಿರ್ವಹಿಸೋಣ. ಭಾರತೀಯ ಸಂಸ್ಕೃತಿಯ ಕುಟುಂಬ ಪದ್ಧತಿಯ ಸನಾತನ ಬೇರುಗಳನ್ನು ಭದ್ರವಾಗಿಸೋಣ.

ಏನಂತೀರಾ??

# ನೀಟ್ ಪರೀಕ್ಷೆ ಅವ್ಯವಹಾರ ಕುರಿತು ನ್ಯಾಯಾಂಗ ತನಿಖೆಗೆ ದವಿಪ ಆಗ್ರಹ

**ಉದಯರಶ್ಮಿ ನ್ಯೂಸ್**

ವಿಜಯಪುರ: ನಗರದಲ್ಲಿರುವ ಗಾಂಧಿ ವೃತ್ತದಿಂದ ಅಂಬೇಡ್ಕರ್ ವೃತ್ತದವರೆಗೆ □□□ಯಾಲಿ ಮೂಲಕ ನೀಟ್ ಪ್ರವೇಶ ಪರೀಕ್ಷೆಯಲ್ಲಿ ನಡೆದ ಭ್ರಷ್ಟಾಚಾರವನ್ನು ವಿರೋಧಿಸಿ ದಲಿತ ವಿದ್ಯಾರ್ಥಿ ಪರಿಷತ್ ವಿದ್ಯಾರ್ಥಿಗಳ ಮೂಲಕ ಜಿಲ್ಲಾ ಅಧಿಕಾರಿಗಳಿಗೆ ಮನವಿ ಮಾಡಿದರು.




ದಲಿತ ವಿದ್ಯಾರ್ಥಿ ಪರಿಷತ್ ಮುಖಂಡ ಅಕ್ಷಯ್ ಕುಮಾರ್ ಮಾತನಾಡಿ, ಜೂನ್ 4 ರಂದು ಪ್ರಕಟಗೊಂಡ ನೀಟ್ ಪರೀಕ್ಷೆ ಫಲಿತಾಂಶದ ಭ್ರಷ್ಟಾಚಾರದ ಪಾರದರ್ಶಕತೆಯ ಕುರಿತು ದೇಶವ್ಯಾಪ್ತಿ ವಿದ್ಯಾರ್ಥಿಗಳು ಹಾಗೂ ಪಾಲಕರು ಹಲವಾರು ಪ್ರಶ್ನೆಗಳನ್ನು ಎತ್ತಿದ್ದಾರೆ. ಯು.ಜಿ.ಸಿ. ಪರೀಕ್ಷಾ ಮಾರ್ಗಸೂಚಿ ಅನ್ವಯ ಅಂಕಗಳನ್ನು ನೀಡಿದ್ದಲ್ಲಿ ವಿದ್ಯಾರ್ಥಿಗಳು ಪಡೆಯಬಹುದಾದ ಅಂಕಗಳೊಂದಿಗೆ ಪ್ರಸ್ತುತ ಒಂದಿಷ್ಟು ವಿದ್ಯಾರ್ಥಿಗಳು ಪಡೆದಿರುವ ಅಂಕಗಳು ಹೊಂದಾಣಿಕೆ ಆಗುತ್ತಿಲ್ಲ.

ಕೆಲವು ವಿದ್ಯಾರ್ಥಿಗಳಿಗೆ ಹೆಚ್ಚುವರಿ ಅಂಕ ನೀಡಿರುಹುದಾಗಿ ಎನ್.ಟಿ.ಎ ಸಮಾಜಿಸಿ ನೀಡಿದೆ. ಆದರೆ ಹೆಚ್ಚುವರಿ ಶುಲ್ಕಗಳನ್ನು ನೀಡಿರುವ ಮಾನದಂಡವು ಸಂಪೂರ್ಣವಾಗಿ ಪಕ್ಷಪಾತಿಯಾಗಿದೆ. ಈ ವರ್ಷ ಪ್ರಕಶಿಸಲಾಗಿದ್ದ ಮಾರ್ಗಸುಚಿ ಅನ್ವಯ ಹೆಚ್ಚುವರಿ ಅಂಕಗಳನ್ನು ನೀಡಲು ಅವಕಾಶವಿಲ್ಲ ಆಚರ್ಯಕರವೇಂಬಂತೆ ಒಂದೇ ಕೇಂದ್ರದಲ್ಲಿ ಪರೀಕ್ಷೆ ಬರೆದ ವಿದ್ಯಾರ್ಥಿಗಳು ಸಮಾನ ಅಂಕಗಳಿಸಿದ್ದಾರೆ.

ಈ ಮುಂಚೆ ರಾಜ್ಯ ಮಟ್ಟದಲ್ಲಿ ಜಂಟಿ ಪ್ರವೇಶ ಪರೀಕ್ಷೆಗಳು ಜಾರಿಯಲ್ಲಿದ್ದಾಗ ಭ್ರಷ್ಟಾಚಾರದ ಕಾರಣವೊಡ್ಡಿಯೆ ಅಖಿಲ ಭಾರತ ಮಟ್ಟದ ನೀಟ್ ಪರೀಕ್ಷೆಯುನ್ನು ಪ್ರಾರಂಭಿಸಲಾಯಿತು. ಭ್ರಷ್ಟಾಚಾರದ ಕುರಿತು ತನಿಖೆ ನಡೆಸಿ ತಪ್ಪಿತಸ್ಥರಿಗೆ ಸೂಕ್ತ ಶಿಕ್ಷೆ ವಿಧಿಸುವುದರ ಜೊತೆಗೆ ಪರೀಕ್ಷಾ ಪದ್ದತಿಯನ್ನು ಬದಲಾಯಿಸುವುದು ಪರಿಹಾರವಲ್ಲ. ಸರ್ಕಾರದ ನಿಷ್ಕಾಳಜಿ ಮತ್ತು ಪರೀಕ್ಷಾ ವ್ಯವಸ್ಥೆಯ ಸಂಪೂರ್ಣ ವ್ಯಾಪಾರಿಕರಣದಿಂದಾಗಿ ಇಡೀ ವೈದ್ಯಕಿಯ ಪರೀಕ್ಷೆಯು ಕಲುಷಿತಕ್ಕೊಳಗಾಗುತ್ತಿದೆ ಮತ್ತು ಅಮಾಯಕ ವಿದ್ಯಾರ್ಥಿಗಳು ಇದರ ಭಲಿಪಶುಆಗಿದ್ದಾರೆ ಈ ಹಿನ್ನಲೆಯಲ್ಲಿ ಒಟ್ಟು ಪ್ರಕರಣದ ಕೂರಿತು ನ್ಯಾಯಾಂಗ ತನಿಕೆ ನಡೆಸಬೇಕು ಮತ್ತು ಇದರಲ್ಲಿ ಭಾಗಿಯಾದ ಎಲ್ಲಾವ್ಯಕ್ತಿಗಳಿಗು ಕಠಿಣಶಿಕ್ಷೆ ವಿಧಿಸಬೇಕೆಂದು ದಲಿತ ವಿದ್ಯಾರ್ಥಿ ಪರಿಷತ್ ಸರ್ಕಾವನ್ನು ಆಗ್ರಹಿಸಿ ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಶಿಕ್ಷಣ ಸಚಿವರಾದ ಧರ್ಮೇಂದ್ರ ಪ್ರದಾನ ಮನವಿ ಮಾದಲಾಯಿತು.

ಈ ಸಂದರ್ಭದಲ್ಲಿ ದಲಿತ ವಿಧ್ಯಾರ್ಥಿ ಪರಿಷತ್ ಮುಖಂಡರಾದ ಮಾದೇಶ, ಯುವರಾಜ್, ಯಾಶಿನ್, ಪ್ರಜ್ವಲ್, ಗೌಡಪ್ಪ ಗೌಡಾ, ಸಂದೇಶ, ಸೇರಿದಂತೆ ಅನೇಕ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

# ಕುವೈತ್ ಅಗ್ನಿ ದುರಂತ: 45 ಮಂದಿ ಭಾರತೀಯರ ಪಾರ್ಥಿವ ಶರೀರ ಸ್ವದೇಶಕ್ಕೆ

ಹೊಸದಿಲ್ಲಿ: ಕುವೈತ್ ನಲ್ಲಿ ನಡೆದ ಭೀಕರ ಅಗ್ನಿದುರಂತದಲ್ಲಿ ಮೃತಪಟ್ಟ ೪೫ ಮಂದಿ ಭಾರತೀಯರ ಪಾರ್ಥಿವ ಶರೀರವನ್ನು ಹೊತ್ತ ಭಾರತೀಯ ವಾಯುಪಡೆಯ ವಿಶೇಷ ವಿಮಾನ ನಿನ್ನೆ ಮುಂಜಾನೆ ಕೊಚ್ಚಿಗೆ ಹೊರಟಿದೆ.

ಸಂತ್ರಸ್ತ ಭಾರತೀಯರ ಪಾರ್ಥಿವ ಶರೀರದೊಂದಿಗೆ ವಿದೇಶಾಂಗ ವ್ಯವಹಾರಗಳ ಖಾತೆಯ ರಾಜ್ಯ ಸಚಿವ ಕೀರ್ತಿವರ್ಧನ್ ಸಿಂಗ್ ಅವರೂ ಇದ್ದಾರೆ. ಭಾರತೀಯರ ಶವಗಳನ್ನು ಕ್ಷಿಪ್ರವಾಗಿ ಸ್ವದೇಶಕ್ಕೆ ತರಲು ಅಗತ್ಯ ಪ್ರಕ್ರಿಯೆಗಳ ಬಗ್ಗೆ ಕುವೈತ್ ಅಧಿಕಾರಿಗಳ ಜತೆ ನಿಕಟವಾಗಿ ಕಾರ್ಯನಿರ್ವಹಿಸುವ ಸಲುವಾಗಿ ಸಚಿವರು ಘಟನಾ ಸ್ಥಳಕ್ಕೆ ತೆರಳಿದ್ದರು.


ಸಂತ್ರಸ್ತ ಭಾರತೀಯರಲ್ಲಿ ಉತ್ತರ ಪ್ರದೇಶದ ವಾರಾಣಾಸಿಯ ಪ್ರವೀಣ್




ಮಾಧವ್ ಸಿಂಗ್, ಗೋರಖ್ಪುರದ ಜೈರಾಮ್ ಗುಪ್ತಾ ಮತ್ತು ಅಂಗದ್ ಗುಪ್ತಾ ಸೇರಿದ್ದಾರೆ. ಪಶ್ಚಿಮ ಬಂಗಾಳದ ಮಿಡ್ನಾಪುರದ ದ್ವಾರಕೀಶ್ ಪಟ್ನಾಯಕ್ ಕೂಡಾ ಘಟನೆಯಲ್ಲಿ ಮೃತಪಟ್ಟಿದ್ದು, ಕಳೆದ ಏಪ್ರಿಲ್ ತಿಂಗಳಲ್ಲಿ ಪುತ್ರಿಯ ಜನ್ಮದಿನ ಸಮಾರಂಭಕ್ಕಾಗಿ ಆಗಮಿಸಬೇಕಿದ್ದ ಅವರು ಪ್ರಯಾಣವನ್ನು ಮುಂದೂಡಿದ್ದರು. ಗುರುವಾರದ ಸುದ್ದಿ ತಲುಪುತ್ತಿದ್ದಂತೆ ಅವರ ಪುತ್ರಿ ಮತ್ತು ಪತ್ನಿ ಆಘಾತಕ್ಕೆ ಒಳಗಾಗಿದ್ದಾರೆ. ದ್ವಾರಕೀಶ್ ಎರಡು ದಶಕಗಳಿಂದ ಕುವೈತ್ ನಲ್ಲಿದ್ದರು.

ಗಾಯಗೊಂಡ ಭಾರತೀಯರ ಚಿಕಿತ್ಸೆಗೆ ನೆರವಾಗಲು ಮತ್ತು ಪಾರ್ಥಿವ ಶರೀರಗಳನ್ನು ತ್ವರಿತವಾಗಿ ಭಾರತಕ್ಕೆ ಒಯ್ಯಲು ಅಗತ್ಯ ಪ್ರಕ್ರಿಯೆಗಳ ಸಲುವಾಗಿ ಸಚಿವ ಕೀರ್ತಿವರ್ಧನ್ ಸಿಂಗ್ ಗುರುವಾರ ಆಗಮಿಸಿದ್ದರು. ಮೃತಪಟ್ಟ ಕೇರಳಿಗರ ಶವಗಳು ಶುಕ್ರವಾರ ಮುಂಜಾನೆ ಕೊಚ್ಚಿನ್ ವಿಮಾನ ನಿಲ್ದಾಣಕ್ಕೆ ಆಮಿಸುವ ನಿರೀಕ್ಷೆ ಇದ್ದು, ಸಿಎಂ ಪಿಣರಾಯ್ ವಿಜಯನ್ ಮತ್ತು ಸಂಪುಟ ಸಹೋದ್ಯೋಗಿಗಳು ಶವಗಳನ್ನು ಸ್ವೀಕರಿಸಲು ಉಪಸ್ಥಿತರಿರುವರು ಎಂದು ತಿಳಿದು ಬಂದಿದೆ.

# ಉತ್ತರೆಯ ಅಂತರಂಗ



## ಭಾವರಶ್ಮಿ

– ಸೌಮ್ಯ ಶ್ರೀ

("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

"ಅಮ್ಮಾ......." ಸಹಿಸಲಾರದ ಪ್ರಸವ ವೇದನೆಯಲ್ಲಿ ಚೀತ್ಕರಿಸುತ್ತಿದ್ದೆ. ಹಸ್ತಿನಾಪುರದ ಸಿಂಹಾಸನ ಅದರ ಅಧಿಪತಿಯ ಆಗಮನಕ್ಕೆ ಚಾತಕ ಪಕ್ಷಿಯಂತೆ ಕಾಯುತ್ತಿರೆ, ನೆರೆದಿದ್ದ ಬಂಧುಬಾಂಧವರೆಲ್ಲ ಪುಟ್ಟ ಪರೀಕ್ಷಿತನ ಮೊಗವನ್ನು ಕಣ್ತುಂಬಿಕೊಳ್ಳಲು ತವಕಿಸುತ್ತಿದ್ದರು.

ಸರತಿಸಾಲಿನಲ್ಲಿ ನೋವುಗಳನ್ನೇ ಉಂಡವಳಿಗೆ ಈ ಹೆರಿಗೆಯ ನೋವು ಅಷ್ಟೇನೂ ಭಾಧಿಸುತ್ತಿರಲಿಲ್ಲ...

"ಉತ್ತರಾ... ಪಾಂಡವರ ವಂಶದಕುಡಿಯನ್ನು ಭುವಿಗೆ ತಂದ ನೀನೇ ಧನ್ಯಳು! ನೋಡಿಲ್ಲಿ ನಿನ್ನ ಸುಕುಮಾರ ಅದೆಷ್ಟು ಮುದ್ದಾಗಿದ್ದಾನೆ!" ಅದಾಗ ತಾನೆ ಪ್ರಪಂಚಕ್ಕೆ ಪಾದರ್ಪಣೆ ಮಾಡಿದ್ದ ನನ್ನ ಪುಟ್ಟ ಕಂದಮ್ಮನನ್ನು ಮಡಿಲಿಗಿರಿಸಿದ್ದರು ನನ್ನತ್ತೆ ಸುಭದ್ರಾ..

ಅರೆಪ್ರಜ್ಞಾವಸ್ತೆಯುಲ್ಲಿದ್ದವಳು ನಿಧಾನವಾಗಿ ಕಣ್ತೆರೆದು ಪುತ್ರನತ್ತ ನೋಡಿದ್ದೆ... "ಅಬ್ಬಾ!!! ಶ್ರೀ ಕೃಷ್ಣನ ವರಪ್ರಸಾದಿಂದ ಜನಿಸಿದ ಈ ಮಗುವಿಗೆ ಅದೆಂತಹಾ ರಾಜಕಳೆ!?" ಎನಿಸದೇ ಇರಲಿಲ್ಲ...

ಗರ್ಭದಲ್ಲಿ ಬೆಳೆಯುತ್ತಿರುವಾಗಲೇ ಅಶ್ವತ್ಥಾಮನ ಬ್ರಹ್ಮಾಸ್ತ್ರ ಪ್ರಯೋಗದಿಂದ ನನ್ನ ಕಂದನ ಪ್ರಾಣಕ್ಕೆ ಹಾನಿಯುಂಟಾದಾಗ ದಯಾಮಯಿ ಶ್ರೀ ಕೃಷ್ಣ ಇವನಿಗೆ ಮರುಜೀವನ ನೀಡಿ, ಪ್ರಸವ ಪೂರ್ವದಲ್ಲೇ ಇಷ್ಟೆಲ್ಲಾ ಪರೀಕ್ಷೆಗೆ ಗುರಿಯಾದ ಇವನು ಪರೀಕ್ಷಿತ ಮಹಾರಾಜನೆಂದು ಜಗತ್ತಿಗೆ ಚಿರಪರಿಚಿತವಾಗಲೆಂದು ಆಶೀರ್ವಾದ ಪಡೆದುಕೊಂಡ ನೀನು ನಿಜಕ್ಕೂ ಭಾಗ್ಯವಂತನೇ ಸರಿ... ನಿನ್ನಂತಹ ದೈವೀ ಕಳೆಯಿರುವ ಮಗುವಿಗೆ ಜನ್ಮಕೊಟ್ಟ ನಾನೇ ಧನ್ಯಳು..ಪುಟ್ಟ ಪರೀಕ್ಷಿತನನ್ನು ಎದೆಗವುಚಿಕೊಂಡು ಮನಸಾರೆ ಮುದ್ದಿಸಿದ್ದೆ..

ಇಂತಹ ಶುಭ ಗಳಿಗೆಯಲ್ಲಿ ನನ್ನ ಪತಿ ಅಭಿಮನ್ಯುವಿದ್ದಿದ್ದರೆ?? ಪ್ರಶ್ನಿಸಿಕೊಂಡವಳಿಗೆ ಅದುವರೆಗೂ ಬಲವಂತವಾಗಿ ತಡೆಯಿಡಿದಿದ್ದ ಅಶ್ರುಧಾರೆ ತಡೆಯಿಲ್ಲದೇ ಜಾರಿತ್ತು.

ಬೇಡಬೇಡವೆಂದರೂ ಕೇಳದ ಮನ ಗತಕಾಲದ ಪುಟಗಳನ್ನು ತಿರುವಿಯಾಕಿತ್ತು...

ಮತ್ಸ್ಯ ಸಾಮ್ರಾಜ್ಯದ ಯುವ ರಾಜಕುಮಾರಿಯಾದ ನಾನು ವಿರಾಟ ಮತ್ತು ಸುದೇಷ್ಣರ ಮುದ್ದಿನ ಮಗಳು ಹಾಗು ಉತ್ತರಕುಮಾರನ ಪ್ರೀತಿಯ ಸಹೋದರಿ...

ನನ್ನ ಪಿತಾಶ್ರೀ ನನ್ನ ಸಲುವಾಗಿ ನೃತ್ಯದಲ್ಲಿ ನೈಪುಣ್ಯತೆಯನ್ನು ಪಡೆದಿದ್ದ ಬೃಹನ್ನಳೆಯನ್ನು ನನಗೆ ಗುರುವಾಗಿ ನೇಮಿಸಿದ್ದರು...ಸುಶ್ರಾವ್ಯವಾಗಿ ಕೇಳಿಬರುವ ಹಿನ್ನೆಲೆ ಸಂಗೀತಕ್ಕೆ ತಕ್ಕ ಹಾಗೆ ಹೆಜ್ಜೆಗೆಜ್ಜೆತೊಟ್ಟು □ನೃತ್ಯ ಮಾಡುತ್ತಿದ್ದರೇ ಸಾಕ್ಷಾತ್ ಕಲಾಸರಸ್ವತಿಯೇ ಆವಾಹನೆಯಾಗಿದ್ದಾಳೇನೋ ಎನ್ನುವಷ್ಟು ಪಾಂಡಿತ್ಯ ನನ್ನ ಗುರುಗಳಲ್ಲಿ.. ಅವರಿಗೆ ಸರಿಸಮಾನವಾಗಿ ನೃತ್ಯ ಮಾಡುವುದು ನನ್ನ ಪಾಲಿಗೆ ಬಹುದೊಡ್ಡ ಸಾಹಸಗಾಥೆಯೇ ಸರಿ..

ಯುವರಾಣಿ ಉತ್ತರಾ ವಿಷಯ ತಿಳಿಯಿತೇ ನಿಮಗೆ?

ಆತುರದಲ್ಲಿ ಸಖಿಯೊಬ್ಬಳು ಅಂತಃಪುರಕ್ಕೆ ಧಾವಿಸಿ ಬಂದಿದ್ದಳು...

ಏನದು? ಕುತೂಹಲದಿಂದಲೇ ಕೇಳಿದ್ದೆ

ತ್ರಿಗರ್ತರು ನಮ್ಮ ರಾಜ್ಯದ ಗೋವುಗಳನ್ನು ಹಿಡಿಯಲು ಕೌರವ ಸೇನೆಯ ಜೊತೆ ಯುದ್ಧವನ್ನೂಡಿದ್ದರು ಆಗ ಬೃಹನ್ನಳೆಯ ವೇಷದಲ್ಲಿದ್ದ ಅರ್ಜುನ ನಮ್ಮ ಯುವರಾಜ ಉತ್ತರ ಕುಮಾರರಿಗೆ ಧೈರ್ಯ ತುಂಬಿ ಕುರುಸೇನೆಯೊಂದಿಗೆ ಹೋರಾಡಿ ಅವರನ್ನು ಪರಾಜಯಗೊಳಿಸಿ ನಮ್ಮ ವಿರಾಟನಗರದ ಗೆಲುವಿಗೆ ಕಾರಣರಾದರು...

ಸುಮಾರು ಒಂದು ವರುಷಗಳ ಕಾಲ ನಮ್ಮ ಆಸ್ಥಾನದಲ್ಲಿ ಅಜ್ಞಾತ ವಾಸದಲ್ಲಿದ್ದ ಪಾಂಡವರ ಬಗ್ಗೆ ಕಿಂಚಿತ್ತೂ ಸುಳಿವು ಸಿಗಲಿಲ್ಲವಲ್ಲ ಅಚ್ಚರಿಪಡುವ ಸರದಿ ನನ್ನದಾಗಿತ್ತು...

ನಮ್ಮ ರಾಜ್ಯವನ್ನು ಶತ್ರುಪಾಳಯದಿಂದ ರಕ್ಷಿಸಿದ್ದು ಪಾಂಡವಶ್ರೇಷ್ಠ ಅರ್ಜುನನೇ ಎಂದು ತಿಳಿದ ನನ್ನ ತಂದೆಯವರಿಗೆ ಅತೀವ ಆನಂದವಾಗಿತ್ತು.

ನನ್ನನ್ನು ಜಗತ್ಪ್ರಸಿದ್ಧ ಶ್ರೇಷ್ಠ ಬಿಲ್ಲುಗಾರ ಅರ್ಜುನನಿಗೆ ಕೊಟ್ಟು ವಿವಾಹಮಾಡಬೇಕೆಂಬ ಇರಾದೆ ನಮ್ಮ ತಂದೆಯಲ್ಲಿ ಮೂಡಿ, ಅದನ್ನು ಪಾಂಡವರ ಮುಂದೆ ಭಿನ್ನಹಿಸಿಕೊಂಡಾಗ ಅರ್ಜುನನು "ಉತ್ತರಾ ನನ್ನ ಶಿಷ್ಯಳು, ಸತತ ಒಂದು ವರುಷಗಳ ಕಾಲ ಅವಳಿಗೆ ನೃತ್ಯವನ್ನು ಕಲಿಸಿಕೊಟ್ಟ ನಾನು ಅವಳಿಗೆ ಗುರುವಿನ ಸಮಾನ, ನಮ್ಮ ಉತ್ತರಾಳಿಗೆ ನನ್ನ ಪುತ್ರ ಅಭಿಮನ್ಯುವೇ ಸರಿಯಾದ ಜೋಡಿ" ಎಂದು ನಿರ್ಧರಿಸಿದ್ದರು...

'ಅಭಿಮನ್ಯು' ನನ್ನಲ್ಲೇ ಉಚ್ಚರಿಸಿ ಕೊಂಡವಳ ಸಂಭ್ರಮಕ್ಕೆ ಕೊನೆಮೊದಲಿರಲಿಲ್ಲ..ನಾಚಿಕೆಯ ಸುಳಿಗಾಳಿ ಕದಪುಗಳ ಮೇಲೆ ಪಸರಿಸಿತ್ತು..

ಅಭಿಮನ್ಯುವಿನೊಟ್ಟಿಗಿನ ನನ್ನ ವಿವಾಹದ ತಯಾರಿಯನ್ನು ಅದ್ದೂರಿಯಾಗಿ ಮಾಡಲಾಗಿತ್ತು. ನನ್ನ ತಂದೆತಾಯಿ, ಸಹೋದರ, ಪಾಂಡವವಂಶದವರು ಹಾಗು ಪ್ರಭು ಶ್ರೀ ಕೃಷ್ಣನ ಸಮಕ್ಷಮದಲ್ಲಿ ಯಾವುದೇ ವಿಘ್ನವಿಲ್ಲದೇ ಸಾಂಘವಾಗಿ ನೆರವೇರಿತ್ತು...

ಅಂದಿನಿಂದ ವೀರರಿಗೆ ವೀರನಾದ ಅಭಿಮನ್ಯುವಿನ ಪ್ರೀತಿಯ ಅಲೆಯಲ್ಲಿ ಮಿಂದೇಳುವ ಸೌಭಾಗ್ಯ ನನ್ನದಾಗಿತ್ತು. ನಮ್ಮ ಪ್ರೀತಿಯ ಫಲವಾಗಿ ನನ್ನ ಗರ್ಭದಲ್ಲಿ ಅವರದೇ ಕುರುಹು ಬೆಳೆಯಲು ಬಹುಕಾಲವೇನು ಬೇಕಾಗಿರಲಿಲ್ಲ...

ಬಹುಷಃ ಹುಟ್ಟಿನಿಂದ ಇಲ್ಲಿಯವರೆಗೂ ಸುಖ ಸಂತೋಷದ ಸುಪ್ಪತ್ತಿಗೆಯಲ್ಲೇ ಬೆಳೆದಿದ್ದ ನನಗೆ ಮುಂದೊದಗುವ ಕಷ್ಟಗಳ ಸುರಿಮಳೆಯ ಪರಿವೆಯೇ ಇರಲಿಲ್ಲ. ಪತಿಯ ಪ್ರೇಮಾನುರಾಗದ ಸವಿ ಇನ್ನು ಕೆಲವೇ ದಿನಗಳಲ್ಲಿ ಹೇಳ ಹೆಸರಿಲ್ಲದೇ ಕಣ್ಮರೆಯಾಗುತ್ತದೆಯೆಂಬ ಸಣ್ಣ ಕುರುಹೂ ಸಹ ದೊರೆತಿರಲಿಲ್ಲ..

ನನ್ನ ದುರಾದೃಷ್ಟವೋ ಅಥವಾ ವಿಧಿಲಿಖಿತವೋ ಎಂಬಂತೆ ದಾಯಾದಿಗಳಾದ ಕೌರವರು ಪಾಂಡವರಿಗೆ ಜಾಗವನ್ನು ಕೊಡಲು ಒಪ್ಪದಾದಾಗ ಯುದ್ಧವೇ ಸರಿಯಾದ ದಾರಿ ಎಂದು ನಿರ್ಧರಿಸಿ ಪಾಂಚಜನ್ಯವನ್ನು ಮೊಳಗಿಸಿಯೇ ಬಿಟ್ಟಿದ್ದರು..

ಇಂತಹದ್ದೊಂದು ರಣಭೀಕರ ಯುದ್ಧ,

ಮುಂದೆ ಅದರಿಂದೊದಗುವ ಪರಿಣಾಮಗಳನ್ನು ನೆನೆದರೆ ಮನದಲ್ಲಿ ಹೇಳಿಕೊಳ್ಳಲಾರದಷ್ಟು ಆತಂಕ,ಭಯದ ವಾತಾವರಣ ಸೃಷ್ಟಿಯಾಗುತ್ತಿತ್ತು..

ಯುದ್ಧದ ಮೊದಲ ದಿನ ನನ್ನ ಪ್ರೀತಿಯ ಸಹೋದರ ಉತ್ತರ ಕುಮಾರ ಶಲ್ಯನಿಂದ ಹತನಾದ ಎಂಬ ವಿಷಯವನ್ನು ತಿಳಿದು ಒಳಗೊಳಗೆ ಕುಗ್ಗಿ ಹೋಗಿದ್ದವಳಿಗೆ ನನ್ನ ಪತಿ ಅಭಿಮನ್ಯು ಚಕ್ರವ್ಯೂಹವನ್ನು ಭೇದಿಸಲು ಸ್ವತಃ ತಾವೇ ರಣರಂಗಕ್ಕೆ ತೆರಳುತ್ತಾರೆ ಎಂಬ ವಿಷಯ ತಿಳಿದು ಎದೆಯಲ್ಲಿ ಭತ್ತ ಕುಟ್ಟಿದಂತಾಗಿತ್ತು...

ರಣರಂಗಕ್ಕೆ ಹೊರಡುವುದಕ್ಕಿಂತ ಮೊದಲು ನನ್ನನು ಕಾಣಲು ಬಂದ ಅಭಿಮನ್ಯುವಿಗೆ ಭಯ,ದುಗುಡದಿಂದ ಚಡಪಡಿಸುತ್ತಿದ್ದ ನನ್ನ ಮುಖಾರವಿಂದ ಅವರನ್ನು ಸ್ವಾಗತ ಮಾಡಿತ್ತು..

"ಉತ್ತರಾ ದೇವಿಯ ದರುಶನವ ಮಾಡ ಬಂದವನಿಗೆ ಕಿಂಚಿತ್ತೂ ಕರುಣೆ ತೋರದೇ ಬೇರೆತ್ತಲೋ ತಿರುಗಿರುವುದಕ್ಕೆ ಕಾರಣವಾದರೂ ಏನು ಪ್ರಿಯೇ? ನನ್ನ ಮೇಲೆ ಕೋಪಗೊಳ್ಳುವಂತಹ ಅದಾವ ದುಷ್ಕಾರ್ಯ ನನ್ನಿಂದ ಜರುಗಿತು? ಹೇಳುವಂತವಳಾಗು ದೇವಿ" ನನ್ನ ಭುಜವನ್ನು ಮೃದುವಾಗಿ ಅದುಮಿದ್ದರು..

ಕಾರಣ ತಿಳಿದಿದ್ದರೂ ನನ್ನ ಮುಖಾಂತರವೇ ತಿಳಿಯುವ ಬಯಕೆಯೇಕೇ? ನೀವು ಯುದ್ಧಕ್ಕೆ ಸನ್ನದ್ಧವಾಗಿರುವುದು ನನಗೆ ಸ್ವಲ್ಪವೂ ಕೂಡ ಇಷ್ಟವಿಲ್ಲ. ಅಷ್ಟಕ್ಕೂ ನಿಮಗಿಂತ ಪರಾಕ್ರಮಿಗಳೂ ಬಲಶಾಲಿಗಳಾದ ನಿಮ್ಮ ಚಿಕ್ಕಪ್ಪ,ದೊಡ್ಡಪ್ಪಂದಿರಿರುವಾಗ ನೀವು ಯುದ್ಧದ ಸಾರಥ್ಯ ವಹಿಸುವುದನ್ನು ನಾನು ಸಹಿಸಲಾರೆ.ಒಂದು ವೇಳೆ ನಿಮಗೇನಾದರೂ ಅಪಾಯವಾದರೇ ನನ್ನ ಗರ್ಭದಲ್ಲಿ ಇದೀಗ ತಾನೆ ಚಿಗುರೊಡೆಯುತ್ತಿರುವ ನಮ್ಮ ಪ್ರೀತಿಯ ಕುಡಿಯ ಕಥೆಯೇನು? ಇಲ್ಲಾ ಸ್ವಾಮಿ ನಿಮ್ಮನ್ನು ಇಲ್ಲಿಂದ ಹೋಗಲು ಖಂಡಿತವಾಗಿಯೂ ಬಿಡಲಾರೆ ನಾನು" ಅತೀವ ದುಃಖದಿಂದ ನನ್ನವರನ್ನು ಆಲಂಗಿಸಿಕೊಂಡಿದ್ದೆ...

"ಇದೆಂತಹಾ ಅಸಂಬದ್ಧ ನಡೆ ಉತ್ತರಾ? ತಾಯಿ ಸುಭದ್ರೆಯು ಗರ್ಭದಲ್ಲಿರುವಾಗಲೇ ಚಕ್ರವ್ಯೂಹವನ್ನು ಭೇದಿಸುವ ಕಲೆಯನ್ನು ನನ್ನ ತಂದೆ ಅರ್ಜುನನಿಂದ ಕೇಳಿ ತಿಳಿದವನು ನಾನು, ಅವರಂತಹ ಪರಾಕ್ರಮಿಯ ಪುತ್ರನಾಗಿ ಜನಿಸಿ, ಹೇಡಿಯಂತೆ ಮನೆಯಲ್ಲಿ ಅಡಗಿ ಕೂರಲು ಹೇಳುವೆಯಾ ದೇವಿ? ನೀನೆ ನೋಡುತ್ತಿರು, ಈ ನಿನ್ನ ಅಭಿಮನ್ಯು ರಣರಂಗದಲ್ಲಿ ವೀರಯೋಧನಂತೆ ಹೋರಾಡಿ ಜಯಶಾಲಿಯಾಗುವುದನ್ನು.... ಈಗ ಬೇರೇನೂ ಚಿಂತಿಸದೇ ರಣರಂಗಕ್ಕೊರಡಲು ನಿನ್ನ ಸಹಮತಿಯ ನೀಡು ದೇವಿ" ಅಂತೂ ನನ್ನನ್ನು ಸಂತೈಸುವುದರಲ್ಲಿ ಯಶಸ್ಸನ್ನು ಕಂಡವರು ಯುದ್ಧಭೂಮಿಗೆ ಹೊರಟೇ ಬಿಟ್ಟಿದ್ದರು...

ಅವರಿಗಾಗಿ, ಅವರ ಗೆಲುವಿಗಾಗಿ ಮನದಲ್ಲೇ ಪ್ರಾರ್ಥಿಸುತ್ತಿದ್ದವಳಿಗೆ ಬರಸಿಡಿಲಿನಂತಹಾ ಸುದ್ದಿಯೊಂದು ಬಂದೆರಗಿತ್ತು..

ಹೌದು! ನನ್ನ ಅಭಿಮನ್ಯು ರಣರಂಗದಲ್ಲಿ ವೀರಮರಣವನ್ನಪ್ಪಿದ ನೋವಿನ ಸುದ್ದಿಯದು..

ಅರ್ಜುನನ್ನು ಹೊರತುಪಡಿಸಿ ಉಳಿದ ಪಾಂಡವರನ್ನು ಸೋಲಿಸುವ ಶಕ್ತಿಯನ್ನು ಪರಶಿವನಿಂದ ಪಡೆದ ಜಯದ್ರಥನು ಅಭಿಮನ್ಯು ಚಕ್ರವ್ಯೂಹವನ್ನು ಭೇದಿಸಿದ ಮರುಕ್ಷಣವೇ ಅದರ ಮುಂಭಾಗದಲ್ಲಿ ನಿಂತು ಪರಾಕ್ರಮಿ ಭೀಮ ಇನ್ನುಳಿದ ಪಾಂಡವರನ್ನು ಅದರ ಒಳ ಹೋಗದಂತೆ ತಡೆಯುತ್ತಿರೆ, ಅತ್ತ ಚಕ್ರವ್ಯೂಹ ರಚನೆಯಿಂದ ಹೊರಬರಲು ತಿಳಿಯದ ಅಭಿಮನ್ಯುವನ್ನು ಕೌರವರು ತಮ್ಮ ಅಧರ್ಮದ ನಡೆ ಹಾಗು ಮೋಸದಿಂದ ಕೊಂದು, ಅವರನ್ನು ಧರೆಗುರುಳಿಸುವಲ್ಲಿ ಸಫಲರಾಗಿದ್ದರು ದುರುಳದುಷ್ಟರು...

ಯುದ್ಧ ಮುಗಿದ ಮರುಗಳಿಗೆಯೇ ನನ್ನನ್ನು ಕಾಣಲು ಬರುತ್ತಾರೆಂದು ಅವರಿಗಾಗಿಯೇ ಪ್ರತೀಕ್ಷೆ ಮಾಡುತ್ತಿದ್ದ ನನಗೆ ಅವರ ಮರಣದ ಸುದ್ದಿ ಬಳುವಳಿಯಾಗಿ ದೊರೆತಿತ್ತು..

ಅಯ್ಯೋ! ಕ್ರೂರ ವಿಧಿಯೇ? ಇನ್ನಾರಿಗಾಗಿ ಈ ಜೀವವನ್ನು ಉಳಿಸಿದ್ದೀಯೇ? ಯುದ್ಧಭೂಮಿಯಲ್ಲಿ ವೀರಮರಣವನ್ನಪ್ಪಿದ ಪತಿಯನ್ನರಸಿ ಭಾರದ ಹೆಜ್ಜೆಗಳನ್ನಿರಿಸುತ್ತ ಅವರನ್ನು ಕಾಣ ಹೋದವಳಿಗೆ ದೇಹವಿಡೀ ರಕ್ತದಿಂದ ತೋಯ್ದು ಅವರ ಮೃತದೇಹವನ್ನು ಕಂಡು ಅರೆಗಳಿಗೆಯೇ ಭುವಿ ಬಿರಿಯಬಾರದೇ? ಎನ್ನುವಷ್ಟು ದುಃಖದ ಛಾಯೆ ಮಡುಗಟ್ಟಿಬಿಟ್ಟಿತ್ತು...


"ಅಭಿಮನ್ಯು ನನ್ನನ್ನು ಬಿಟ್ಟು ನೀವೊಬ್ಬರೇ ಸ್ವರ್ಗವಾಸಿಯಾಗಲು ಹೋಗುತ್ತಿರುವುದು ನಿಮಗಾದರೂ ನ್ಯಾಯವೇ? ಇಲ್ಲಾ.... ಖಂಡಿತ ಇದು ಅನ್ಯಾಯ...ನನ್ನನ್ನು ನಿಮ್ಮ ಜೊತೆಯಲ್ಲಿಯೇ ಕರೆದುಕೊಂಡು ಹೋಗಿ, ಇನ್ನಾರಿಗಾಗಿ ಈ ಧರಣಿಯಲ್ಲಿ ಜೀವನ ಕಳೆಯಲಿ ಪ್ರಾಣಪ್ರಿಯಾ....ಬಹುಷಃ ನನ್ನ ರೋಧನೆಯನ್ನು ಕಂಡ ಮುಗಿಲಿಗೂ ಬೇಸರವೆನಿಸಿ ಅವಳೂ ಸಹ ಆಗಸದೊಡಲಿನಿಂದ ಮಳೆಗರೆದಿದ್ದಳು...

ಅವರ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಮಾಡಲು ಮುಂದಾಗುತ್ತಲೇ ಎದೆಯೊಳಗಡಗಿದ್ದ ಅಷ್ಟೂ ನೋವು ಎಗ್ಗುಸಿಗ್ಗಿಲ್ಲದೇ ಕಣ್ಣೀರ ಧಾರೆಯಾಗಿ ಹೊರ ನುಸುಳಿತ್ತು... ಅರಮನೆಯಲ್ಲಿ ಸುಕೋಮಲವಾಗಿ ಬೆಳೆದಿದ್ದ ನಾನು ಆ ರಣರಂಗದ ಸ್ಮಶಾನದಲ್ಲಿ ಅಭಿಮನ್ಯುವಿಲ್ಲದೇ ಅವರ ಪ್ರೀತಿಯಿಲ್ಲದೇ ಅಕ್ಷರಶಃ ಅನಾಥೆಯಾಗಿದ್ದೆ. ಮುಡಿಯಲ್ಲಿರಿಸಿದ್ದ ಪಾರಿಜಾತ ಅದೆಂದಿಗೋ ಬಾಡಿತ್ತು, ಅಭಿಮನ್ಯುವಿನ ಹೆಸರಿನಲ್ಲಿ ಹಣೆಗಿಟ್ಟ ಕುಂಕುಮ ಯಾವಾಗಲೋ ಅಳಿಸಿ, ತೊಟ್ಟಿದ್ದ ರೇಷ್ಮೆಯಂಚಿನ ಸೀರೆ ರಣರಂಗದ ಹೆಣದ ರಾಶಿಗಳ ಧೂಳಿಗೆ ಮಾಸಲಾಗಿತ್ತು....

ಇನ್ನು ಬದುಕುವುದರಲ್ಲಿ ಅರ್ಥವಿಲ್ಲ...ಅಭಿಮನ್ಯುವಿನ ಉರಿಯುತ್ತಿರುವ ಚಿತೆಯಲ್ಲಿಯೇ ಹಾರಿ ಈ ದೇಹವನ್ನು ನಾಶಮಾಡಿಕೊಳ್ಳುವೆ ಒಂದೇ ಸಮನೇ ಕೂಗುತ್ತ,ಅರಚುತ್ತಾ, ಪ್ರಲಾಪಿಸುತ್ತಿದ್ದ ನನ್ನ ಭುಜದ ಮೇಲೆ ಜಗತ್ ರಕ್ಷಕ ಶ್ರೀಕೃಷ್ಣನ ಸಾಂತ್ವನದ ಕೈನ ತಣ್ಣನೆಯ ಸ್ಪರ್ಶವಾಗಿತ್ತು...

"ಮಗು ಉತ್ತರಾ, ನೀನು ನಿನ್ನ ಗರ್ಭದಲ್ಲಿರುವ ಪಾಂಡವಕುಲೋದ್ಧಾರಕನಿಗಾಗಿ, ನಿನ್ನ ಅಭಿಮನ್ಯುವಿನ ಕುಡಿಗಾಗಿ ಬದುಕಲೇ ಬೇಕಾಗಿದೆ...ಮುಂದೆ ನಿನ್ನ ಮಗ ಪಾಂಡವವಂಶದ ರಾಜನಾಗಿ, ದೇಶವನ್ನು ಸಮರ್ಥ ರೀತಿಯಲ್ಲಿ ಆಳುವಂತೆ ಬೆಳೆಸುವುದು ಅವನ ತಾಯಿಯಾದ ನಿನ್ನ ಕರ್ತವ್ಯ".... ಎಂದಿದ್ದರು.

"ಹೌದು, ಜಗದೋದ್ಧಾರನ ಮಾತು ಸತ್ಯ!... ನನ್ನ ಪತಿ ಅಭಿಮನ್ಯುವಿನ ಅಂಶ ನನ್ನ ಗರ್ಭದಲ್ಲಿ ಬೆಳೆಯುತ್ತಿದೆ. ನಮ್ಮ ಪ್ರೀತಿಯ ಕುಡಿಯನ್ನು ಸಾಕಿ ಸಲಹುವ ಜವಾಬ್ದಾರಿ ನನ್ನ ಮೇಲಿದೆ. ಹೌದು ನಾನು ಬದುಕಲೇಬೇಕು, ನನ್ನ ಕಂದನ ಏಳಿಗೆಯನ್ನು ನೋಡುತ್ತಾ, ಅಭಿಮನ್ಯುವಿನ ನೆನಪಿನಲ್ಲೇ ಈ ಜೀವನವನ್ನು ಸವೆಸುತ್ತೇನೆ...." ಎಂದುಕೊಳ್ಳುವಷ್ಟರಲ್ಲಿ ಮಡಿಲಲ್ಲಿದ್ದ ಪುಟ್ಟ ಪರೀಕ್ಷಿತನ ಅಳು ನನ್ನನ್ನು ವರ್ತಮಾನಕ್ಕೆ ಕರೆತಂದಿತ್ತು. ನನ್ನೆಲ್ಲ ನೋವುಗಳನ್ನು ಮರೆಸುವ ಶಕ್ತಿಯಿರುವುದು ಈ ಕಂದನಿಗೆ ಮಾತ್ರ. ಅತೀವ ಪುತ್ರವಾತ್ಸಲ್ಯದಿಂದ ಅವನನ್ನು ಅಪ್ಪಿದ್ದೆ...



# ಮಳೆ

ಉದಯರಶ್ಮಿ ದಿನಪತ್ರಿಕೆ

## ಕಾವ್ಯರಶ್ಮಿ

– ಗಣೇಶ್ ಕರ್ಕೇರ

("ನಮ್ಮ ಕಥಾ ಅರಮನೆ" ಬರಹಗಾರರು)



ಈಗಷ್ಟೇ ಸುರಿದು ಮುಗಿದ ಮಳೆಗೆ
ಕಿಟಕಿಯ ಗಾಜಿಗಂಟಿ ಕುಳಿತ ಹನಿಗೂ
ಒಮ್ಮೆ ಉದುರಿ ಬೀಳುವ ಧಾವಂತ
ತನ್ನವಳ ಒಡಲಲ್ಲೊಂದಾಗಲು
ಭೋರ್ಗರೆದು ಸುರಿದು ಸುಮ್ಮನಾದ
ಮಳೆಗೇನು ಗೊತ್ತು ಎದ್ದ ರಾಡಿಯ
ನೊಂದ ಭೂಮಿಯ ಲೆಕ್ಕಾಚಾರ
ವಿಧಿಬರಹವೇ ಹೀಗೆ ಅಗೋಚರ
ಸುರಿದು ಎದ್ದು ಹೋದವಳಿಗಿಂತ
ಇದ್ದು ಅನುಭವಿಸುವವ ಬಲ್ಲ
ಮರೆತೂ ಕೂಡಾ ಮರೆಯಲಾಗದ
ಉಳಿದ ಹಳೆನೆನಪಿನ ಕಳೇಬರ
ನೆನಪ ಗೋರಿಯ ಮೇಲೊಂದು
ಹೂಗುಚ್ಛವಿಟ್ಟು ಪ್ರಾರ್ಥಿಸುವೆ
ಕ್ಷಮಿಸು ಇನ್ನೆಂದೂ ನೆನೆಯಲಾರೆ
ಮತ್ತೆಂದೂ ನೆನಪಾಗದಿರು ಎಂದು



**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR